ಮಂಟಪ ಮಾಲೆ - ೧೬೯

# ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗಸಂಬಂಧಿ ಸ್ವರೂಪ

ಡಾ. ಟಿ. ಆರ್. ಚಂದ್ರಶೇಖರ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

**Karnatakadalli Saksharateya Lingasambandhi Swarupa**

*by*
**Dr. T.R. Chandrashekhara**
Professor
Dept. of Development Studies
Kannada University, Hampi
Vidyaranya 583 276

*Published by*
**Dr. A. Mohana kuntar**
Director, Prasaranga
Kannada University, Hampi
Vidyaranya 583 276

Pages: IV + 38. **Price: Rs. 10/-**

**ISBN 978-93-80994-10-9**

First Impression : 2010

www. kannadauniversity.org

© ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬೆಲೆ ರೂ : ೧೦/-

ಅಕ್ಷರ ಸಂಯೋಜನೆ
ವಿದ್ಯಾರಣ್ಯ ಗಣಕ ಕೇಂದ್ರ,
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

*ಪುಸ್ತಕ ದೊರೆಯುವ ಸ್ಥಳ*
ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ನಂ. ೧, ಹಳೆಯ ಕಾನೂನು ಕಾಲೇಜು ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯

ದೂರವಾಣಿ : ೦೮೦ - ೨೨೩೭೭೩೮೮

ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಮುದ್ರಣ
ನೇತ್ರಾ ಪ್ರಿಂಟರ್ಸ್, ಬೆಂಗಳೂರು

COMMUNITY HEALTH CELL
LIBRARY and Information Centre
BANGALORE

EDU-100
12635 P10

# ಶಬ್ದಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ-ಕನ್ನಡಿಗ-ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ : ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿ ಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ

ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾ ಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ:ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಹತ್ತಾರು ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಕುರಿತು ಸಾಮಾನ್ಯ ಓದುಗರಿಗೆ ಅರಿವನ್ನು ನೀಡಲು ಮಂಟಪ ಮಾಲೆಯಲ್ಲಿ ಕಿರುಪುಸ್ತಕಗಳನ್ನು ಪ್ರಕಟಿಸುತ್ತಿದೆ. 'ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗಸಂಬಂಧಿ ಸ್ವರೂಪ' ಎಂಬ ಕಿರುಹೊತ್ತಿಗೆಯನ್ನು ಈ ಮಾಲೆಗಾಗಿ ಬರೆದು ಕೊಟ್ಟಿರುವ ಡಾ. ಟಿ.ಆರ್. ಚಂದ್ರಶೇಖರ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ. ಎ. ಮೋಹನ ಕುಂಟಾರ್ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನಮೂರ್ತಿ ಅವರಿಗೆ ಆಭಾರಿಯಾಗಿದ್ದೇನೆ.

ಡಾ. ಎ. ಮುರಿಗೆಪ್ಪ<br>ಕುಲಪತಿ

## ಪ್ರಸ್ತಾವನೆ

ಅಭಿವೃದ್ಧಿಯಲ್ಲಿ ಸಾಕ್ಷರತೆಯ ಮಹತ್ವವನ್ನು ಕುರಿತ ಚರ್ಚೆಯು ಅಮರ್ತ್ಯಸೇನ್, ಮೆಹಬೂಬ್ ಉಲ್ ಹಕ್ ಅವರ ಬರವಣಿಗೆ ಹಾಗೂ ಸಂಶೋಧನೆಯಿಂದಾಗಿ ಮತ್ತು ಯುಎನ್‌ಡಿಪಿಯು ಪ್ರಕಟಿಸುತ್ತಿರುವ ಮಾನವ ಅಭಿವೃದ್ಧಿ ವರದಿಗಳಿಂದಾಗಿ ಹೊಸ ನೆಲೆಯನ್ನು ಹಾಗೂ ಹೊಸ ಆಯಾಮವನ್ನು ಇಂದು ಪಡೆದುಕೊಂಡಿದೆ. ಅನೂಚಾನವಾಗಿ ಅದನ್ನು ಅಭಿವೃದ್ಧಿಯ ಸಾಧನವಾಗಿ ಮಾತ್ರ ಪರಿಭಾವಿಸಿಕೊಳ್ಳುತ್ತಾ ಬರಲಾಗಿದೆ. ಆದರೆ ಅದರ ಮಹತ್ವವನ್ನು ಅಮರ್ತ್ಯಸೇನ್ ಅವರು ಎರಡು ನೆಲೆಗಳಿಂದ ಪರಿಭಾವಿಸಿಕೊಳ್ಳುವ ಪರಿಯನ್ನು ತಮ್ಮ ಬರಹಗಳಲ್ಲಿ ಮತ್ತೆ ಮತ್ತೆ ಪ್ರತಿಪಾದಿಸಿಕೊಂಡು ಬರುತ್ತಿದ್ದಾರೆ. ಅದನ್ನು ಅವರು ಅಭಿವೃದ್ಧಿಯ 'ಸಾಧನ'ವಾಗಿ, 'ಸಂಪನ್ಮೂಲ'ವಾಗಿ ಹಾಗೂ ಅದರ 'ಸಾಧ್ಯ'ವಾಗಿಯೂ ನೋಡುವ ಕ್ರಮವನ್ನು ನಮಗೆ ತೋರಿಸಿಕೊಟ್ಟಿದ್ದಾರೆ. ಲಿಂಗ ಸಮಾನತೆ ದೃಷ್ಟಿಯಿಂದ ಮಹಿಳೆಯರ ಶಿಕ್ಷಣ ಮತ್ತು ಅವರ ಸಾಕ್ಷರತೆ – ಇವುಗಳ ಅಭಿವೃದ್ಧಿ ಸಂಬಂಧಿ ನಿರ್ಣಾಯಕ ಪಾತ್ರದ ಬಗ್ಗೆ ಇಂದು ವ್ಯಾಪಕ ಚರ್ಚೆಗಳಾಗುತ್ತಿವೆ. ಈ ಬಗೆಯ ಚರ್ಚೆಗೆ ಅನುವು ಮಾಡಿಕೊಟ್ಟ ಕೀರ್ತಿ ಅಮರ್ತ್ಯಸೇನ್‌ಗೆ ಸಲ್ಲಬೇಕು. ಒಂದು ಕಾಲದಲ್ಲಿ ಅರ್ಥಶಾಸ್ತ್ರದ ಪಠ್ಯಗಳಲ್ಲಿ ಶಿಕ್ಷಣ ಮತ್ತು ಆರೋಗ್ಯ ಕುರಿತಂತೆ ಯಾವುದೇ ಚರ್ಚೆಗಳಿರುತ್ತಿರಲಿಲ್ಲ. ಇಂದು ಪರಿಸ್ಥಿತಿ ಬದಲಾಗಿದೆ. ಯುಎನ್‌ಡಿಪಿಯು ರೂಪಿಸಿರುವ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿನ ಮೂರು ಸೂಚಿಗಳಲ್ಲಿ ಸಾಕ್ಷರತೆ ಮತ್ತು ಶಿಕ್ಷಣಗಳನ್ನು ಒಳಗೊಂಡ ಸಂಯುಕ್ತ ಸೂಚಿಯು ಮಹತ್ವದ್ದಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಬಂಧದಲ್ಲಿ ಮಹಿಳೆಯರ ಸಾಕ್ಷರತೆ ಕುರಿತಂತೆ ಕರ್ನಾಟಕವು ಸಾಧಿಸಿಕೊಂಡಿರುವ ಸಾಧನೆ ಹಾಗೂ ಅದರ ಲಿಂಗ ಸಂಬಂಧಿ ಆಯಾಮಗಳನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ. ಮಹಿಳೆಯರ ಸಾಕ್ಷರತೆ ಕುರಿತ ಚರ್ಚೆಯು ಕರ್ನಾಟಕದ ಅಭಿವೃದ್ಧಿಯನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ. ವಾಸ್ತವವಾಗಿ ಮಹಿಳೆಯರು ಮತ್ತು ಪುರುಷರ ನಡುವಿನ ಸಾಕ್ಷರತಾ ಅಂತರವು ಲಿಂಗ ಅಸಮಾನತೆಯ ಬಹುಮುಖ್ಯ ಸೂಚಿಯಾಗಿದೆ. ಒಂದು ವೇಳೆ ಸಮಾಜದಲ್ಲಿ ಗಂಡು-ಹೆಣ್ಣುಗಳ ನಡುವೆ ಸಮಾನ ಅವಕಾಶಗಳಿದ್ದ ಪಕ್ಷದಲ್ಲಿ ಪುರುಷರ ಹಾಗೂ ಮಹಿಳೆಯರ ಸಾಕ್ಷರತೆಯಲ್ಲಿ ಅಸಮಾನತೆಯಿರಲು ಸಾಧ್ಯವಿಲ್ಲ. ಆದರೆ ವಾಸ್ತವವಾಗಿ ವಿಶ್ವದ ಯಾವುದೇ ದೇಶದಲ್ಲೂ ಸಾಕ್ಷರತೆಯಲ್ಲಿ ಲಿಂಗ ಸಮಾನತೆ ಕಂಡು ಬರುವುದಿಲ್ಲ (ನೋಡಿ: ಯುಎನ್‌ಡಿಪಿಯು ೧೯೯೦ರಿಂದ ಪ್ರಕಟಿಸುತ್ತಿರುವ ಯಾವುದೇ ವರ್ಷದ ಮಾನವ ಅಭಿವೃದ್ಧಿ ವರದಿ). ಈಗಲೂ ಮಹಿಳೆಯರ ಸಾಕ್ಷರತೆ ಹಾಗೂ ಶಿಕ್ಷಣವನ್ನು

ಗ್ರಾಮಾಂತರ ಪ್ರದೇಶದಲ್ಲಿ ಕುಟುಂಬದ ಮೇಲಿನ ಹೊರೆಯೆಂದೆ ಭಾವಿಸಲಾಗುತ್ತಿದೆ. ಅವರ ಶಿಕ್ಷಣದ ಮೇಲೆ ಬಂಡವಾಳ ತೊಡಗಿಸುವುದೆಂದರೆ ಮತ್ತೊಬ್ಬರ ಮನೆಯ ಗಿಡಕ್ಕೆ ನೀರು ಹಾಕಿದಂತೆಯೆಂದೆ ಭಾವಿಸಲಾಗುತ್ತಿದೆ. ಸಾಕ್ಷರತೆಯಲ್ಲಿನ ಲಿಂಗಸಂಬಂಧಿ ಅಸಮಾನತೆಯನ್ನು ಕೇವಲ ಮಹಿಳೆಯರು ಮತ್ತು ಪುರುಷರ ನಡುವಿನ ನೆಲೆಯಲ್ಲಿ ಮಾತ್ರ ಚರ್ಚಿಸಲಾಗುತ್ತಿದೆ. ಮಹಿಳೆಯರನ್ನು ಒಂದು 'ಅಭಿನ್ನ ವರ್ಗ'ವೆಂದು ಭಾವಿಸಿ ಚರ್ಚೆಗಳನ್ನು ಸಾಮಾನ್ಯವಾಗಿ ನಡೆಸುತ್ತಾ ಬಂದಿರುವುದನ್ನು ಕಾಣಬಹುದು. ಮಹಿಳೆಯರ ಸಾಕ್ಷರತೆಗೆ ಸಂಬಂಧಿಸಿದಂತೆ ಅದರ ವರ್ಗ ಸಂಬಂಧಿ ಹಾಗೂ ಲಿಂಗಸಂಬಂಧಿ ನೆಲೆಗಳನ್ನು ಮಾತ್ರ ಚರ್ಚೆಯ ನೆಲೆಗೆ ತರಲಾಗಿದೆ (ಗೋಪಾಲ ಗುರು:೧೯೯೫). ಆದರೆ ಭಾರತದಂತಹ ಸಂದರ್ಭದಲ್ಲಿ ಅದಕ್ಕೆ ಜಾತಿ ಸಂಬಂಧಿ ಆಯಾಮವೂ ಇದೆ ಎಂಬುದನ್ನು ಸಾಮಾನ್ಯವಾಗಿ ನಿರ್ಲಕ್ಷಿಸುತ್ತಾ ಬರಲಾಗಿದೆ (ವಿವರಗಳಿಗೆ, ಅನುಪಮ ರಾವ್ ಸಂಪಾದಿಸಿರುವ 'ಜೆಂಡರ್ ಆಂಡ್ ಕಾಸ್ಟ್' ಕೃತಿಯಲ್ಲಿನ ಪ್ರಬಂಧಗಳು:೨೦೦೫). ಇಲ್ಲಿನ ಚರ್ಚೆಯಲ್ಲಿ ಲಿಂಗಸಂಬಂಧಿ ಸಾಕ್ಷರತಾ ಅಸಮಾನತೆಯನ್ನು ಶಿಷ್ಟ ಮತ್ತು ಪರಿಶಿಷ್ಟವೆಂಬ ನೆಲೆಗಳಲ್ಲಿ ಚರ್ಚಿಸುವ ಉದ್ದೇಶವಿದೆ. ಸಾಕ್ಷರತೆಯನ್ನು ಅಮರ್ತ್ಯಸೇನ್ ಜನರಿಗೆ 'ಧಾರಣಾ ಸಾಮರ್ಥ್ಯ'ವನ್ನು ನೀಡುವ ಒಂದು ಸಂಗತಿಯನ್ನಾಗಿ ಪರಿಭಾವಿಸಿ ಕೊಂಡಿದ್ದಾರೆ. ಅನಕ್ಷರತೆಯನ್ನು ಅವರು 'ಸಾಮಾಜಿಕ ವೈಫಲ್ಯ'ವೆಂದು ಮತ್ತು ಅದೊಂದು 'ಅಸ್ವಾತಂತ್ರ್ಯ'ವೆಂದೂ ಪರಿಭಾವಿಸಿ ಕೊಂಡಿದ್ದಾರೆ. ಈ ಪ್ರಬಂಧದಲ್ಲಿ ಕೆಳಕಂಡ ಸಂಗತಿಗಳನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ.

೧. ಅಭಿವೃದ್ಧಿಯಲ್ಲಿ ಸಾಕ್ಷರತೆಯ ಮಹತ್ವ ಮತ್ತು ಪಾತ್ರ ಹಾಗೂ ಸಾಕ್ಷರತೆಯ ಲಿಂಗ ಸಂಬಂಧಿ ನೆಲೆಗಳನ್ನು ಹಿಡಿದಿಡುವುದು.
೨. ಕರ್ನಾಟಕದಲ್ಲಿ ಮಹಿಳೆಯರ ಸಾಕ್ಷರತೆಯು ಬೆಳೆದು ಬಂದ ರೀತಿಯನ್ನು ಚರ್ಚಿಸುವುದು.
೩. ಸಾಕ್ಷರತೆಗೆ ಸಂಬಂಧಿಸಿದಂತೆ ಮೂರು ಬಗೆಯ ಅಸಮಾನತೆಗಳನ್ನು ಗುರುತಿಸಲಾಗಿದೆ ಮತ್ತು ಅವುಗಳ ನೆಲೆ–ಬೆಲೆಗಳನ್ನು ಚರ್ಚಿಸಲಾಗಿದೆ. ಅವುಗಳಾವುವೆಂದರೆ ವರ್ಗ ಸಂಬಂಧಿ ಸಾಕ್ಷರತಾ ಅಸಮಾನತೆ, ಲಿಂಗ ಸಂಬಂಧಿ ಸಾಕ್ಷರತಾ ಅಸಮಾನತೆ ಮತ್ತು ಜಾತಿ ಸಂಬಂಧಿ ಸಾಕ್ಷರತಾ ಅಸಮಾನತೆ.
೪. ಕರ್ನಾಟಕದಲ್ಲಿನ ಸಾಕ್ಷರತೆಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯ ನೆಲೆಗಳನ್ನು ಲಿಂಗಸಂಬಂಧಿ ಆಯಾಮಗಳಲ್ಲಿ ಹಿಡಿದಿಡಲು ಪ್ರಯತ್ನಿಸಲಾಗಿದೆ.
೫. ಅಭಿವೃದ್ಧಿ ಮತ್ತು ಲಿಂಗ ಸಮಾನತೆಗಳ ನಡುವೆ ಸಂಬಂಧವನ್ನು ಪರಿಶೀಲಿಸುವುದು.

ಈ ಪ್ರಬಂಧದಲ್ಲಿ ಏಳು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಅಭಿವೃದ್ಧಿಯಲ್ಲಿ ಸಾಕ್ಷರತೆಯ ಪಾತ್ರ ಹಾಗೂ ಅದರ ಮಹತ್ವವನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ. ಎರಡನೆಯ ಭಾಗದಲ್ಲಿ ಕರ್ನಾಟಕದಲ್ಲಿ ಸಾಕ್ಷರತೆಯು ನಡೆದು ಬಂದ ದಾರಿಯನ್ನು

ಸ್ಥೂಲವಾಗಿ ಗುರುತಿಸಲಾಗಿದೆ. ಮೂರನೆಯ ಭಾಗದಲ್ಲಿ ಮಹಿಳೆಯರ ಸಾಕ್ಷರತೆಯ ಶಿಷ್ಟ ಮತ್ತು ಪರಿಶಿಷ್ಟ ನೆಲೆಗಳನ್ನು ಹಿಡಿದಿಡಲಾಗಿದೆ. ನಾಲ್ಕನೆಯ ಭಾಗದಲ್ಲಿ ವಯಸ್ಕ ಮಹಿಳೆಯರ ಸಾಕ್ಷರತೆಯ ಸ್ವರೂಪವನ್ನು ಚರ್ಚಿಸಲಾಗಿದೆ. ಐದನೆಯ ಭಾಗದಲ್ಲಿ ಸಾಕ್ಷರತೆಗೆ ಸಂಬಂಧಿಸಿದಂತೆ ಗ್ರಾಮೀಣ ಮತ್ತು ನಗರಗಳ ನಡುವಿನ ಅಂತರವನ್ನು ಕುರಿತಂತೆ ಕೆಲವು ಸಂಗತಿಗಳನ್ನು ಪರಿಶೀಲಿಸಲಾಗಿದೆ. ಆರನೆಯ ಭಾಗದಲ್ಲಿ ಸಾಕ್ಷರತೆಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯ ಪ್ರಮಾಣವನ್ನು ಅಳೆಯಲು ಪ್ರಯತ್ನಿಸಲಾಗಿದೆ.

ಏಳನೆಯ ಭಾಗದಲ್ಲಿ ಲಿಂಗ ಸಮಾನತೆ ಮತ್ತು ಅಭಿವೃದ್ಧಿಗಳ ನಡುವಣ ಸಂಬಂಧವನ್ನು ಪರಿಶೀಲಿನೆಗೆ ಒಳಪಡಿಸಲಾಗಿದೆ. ವರಮಾನ ಕೇಂದ್ರಿತ ಅಭಿವೃದ್ಧಿ ಪ್ರಣಾಳಿಕೆ ಮತ್ತು ಜನರ ಧಾರಣಾಸಾಮರ್ಥ್ಯವನ್ನು ಕೇಂದ್ರನ್ನಾಗಿ ಮಾಡಿಕೊಂಡಿರುವ ಅಭಿವೃದ್ಧಿ ಪ್ರಣಾಳಿಕೆಗಳಿಗೂ ಮತ್ತು ಲಿಂಗಸಂಬಂಧಿ ಸಾಕ್ಷರತಾ ಅಂತರಕ್ಕೂ ನಡುವಣ ಸಂಬಂಧ ಎಷ್ಟೊಂದು ಸಂಕೀರ್ಣ ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

## ಭಾಗ-೧
## ಅಭಿವೃದ್ಧಿ ಮತ್ತು ಸಾಕ್ಷರತೆ

ಈಗಾಗಲೇ ತಿಳಿಸಿರುವಂತೆ ಅಭಿವೃದ್ಧಿಯಲ್ಲಿ ಸಾಕ್ಷರತೆಯ ಮಹತ್ವವನ್ನು ಅತ್ಯಂತ ಸೂಕ್ಷ್ಮವಾಗಿ ಹಿಡಿದಿಟ್ಟ ಕೀರ್ತಿ ಅಮರ್ತ್ಯಸೇನ್ ಮತ್ತು ಮೆಹಬಬೂಬ್ ಉಲ್ ಹಕ್ ಅವರಿಗೆ ಸಲ್ಲಿಸಬೇಕು. ಸಾಕ್ಷರತೆಯು ಅಭಿವೃದ್ಧಿಯ ಪ್ರಧಾನ ಸಾಧನವೆಂದು ಮತ್ತು ಅದು ಅಭಿವೃದ್ಧಿಯ ಪ್ರಾಥಮಿಕ ಗುರಿಯೆಂಬುದನ್ನು ಅವರು ಸ್ಪಷ್ಟವಾಗಿ ತೋರಿಸಿ ಕೊಟ್ಟಿದ್ದಾರೆ. (ಅಮರ್ತ್ಯಸೇನ್:೧೯೯೯, ೨೦೦೨, ಮೆಹಬೂಬ್ ಉಲ್ ಹಕ್ : ೧೯೯೫, ೧೯೯೮). ಆದರೆ ವಾಸ್ತವವಾಗಿ ಸಮಾಜದಲ್ಲಿ ಜನರನ್ನು-ಮಹಿಳೆಯರನ್ನು ಒಳಗೊಂಡಂತೆ – ಅಭಿವೃದ್ಧಿಯ ಸಾಧನವಾಗಿ ಮಾತ್ರ ನೋಡಲಾಗುತ್ತಿದೆಯೇ ವಿನಾ ಅಭಿವೃದ್ಧಿಯ ಗುರಿಯಾಗಿಯಲ್ಲ. ಜನರು ಅಭಿವೃದ್ಧಿಯ 'ಸಾಧನ'ವೋ ಅಥವಾ ಅದರ 'ಸಾಧ್ಯ'ವೋ ಎಂಬುದನ್ನು ಕುರಿತ ಚರ್ಚೆಯನ್ನು ಮುಂಚೂಣಿಗೆ ಸನ್ ಮತ್ತು ಹಕ್ ತಂದರು. ಅಭಿವೃದ್ಧಿಯ ನಿರ್ವಚನದ ನೆಲೆಯಲ್ಲಿಯೆ ಅವರು ಇದನ್ನು ಪರಿಶೀಲಿಸುತ್ತಾರೆ.

### ಸಾಕ್ಷರತೆಯು ಜನರಿಗೆ ಅದರಲ್ಲೂ ಮಹಿಳೆಯರಿಗೆ ಯಾಕೆ ಬೇಕು?

ಸಾಂಪ್ರದಾಯಿಕ ಅಭಿವೃದ್ಧಿ ಕುರಿತ ಮೀಮಾಂಸೆಯಲ್ಲಿ ರೈತನೊಬ್ಬ ದಕ್ಷನಾಗಿ ವ್ಯವಸಾಯ ಮಾಡಲು ಅಕ್ಷರಸ್ಥನಾಗಬೇಕು, ಕಾರ್ಮಿಕನೊಬ್ಬ ಉತ್ತಮವಾಗಿ ಕೆಲಸ ಮಾಡಲು ಅವನಿಗೆ ಅಕ್ಷರ ಜ್ಞಾನ ಬೇಕು, ಮಹಿಳೆಯೊಬ್ಬಳು ಉತ್ತಮ ತಾಯಿಯಾಗಲೂ ಅವಳಿಗೆ ಅಕ್ಷರ ಜ್ಞಾನ ಬೇಕು, ಕುಟುಂಬವೊಂದನ್ನು ಸಮರ್ಪಕವಾಗಿ ನಿರ್ವಹಿಸಲು

ಮಹಿಳೆಗೆ ಸಾಕ್ಷರತೆ ಬೇಕು. ಒಳ್ಳೆಯ ಹೆಂಡತಿಯಾಗಲು, ಗೃಹಿಣಿಯಾಗಲು ಅವಳಿಗೆ ಅಕ್ಷರ ಜ್ಞಾನಬೇಕೆಂದು ವಾದ ಮಾಡುವುದು ಕಂಡುಬರುತ್ತದೆ. ಪತ್ರಿಕೆಯೊಂದರ ಅಂಕಣಗಾರ ಪ್ರತಾಪ ಸಿಂಹ ಎಂಬುವವರು ಬರೆದ 'ಹುಚ್ಚು ಕುದುರೆಯಾಗಬೇಡ : ಹಾರುವ ಹಕ್ಕಿಯಾಗು' ಎಂಬ ಲೇಖನದಲ್ಲಿ. (ದಿನಾಂಕ ೧೫, ಮಾರ್ಚ್, ೨೦೦೮. ವಿಜಯ ಕರ್ನಾಟಕ, ಪು. ೬) ಈ ಮಾತು ಬರೆದಿದ್ದಾರೆ. 'ಮಕ್ಕಳಿಗೆ ಮತ್ತು ಗಂಡನಿಗೆ ಒಳ್ಳೆಯ ಸಂಸ್ಕಾರ ವಿದ್ಯೆ ಕೊಡಬೇಕಾದವಳು ಅಮ್ಮನಾದ ಹೆಣ್ಣು. ಒಂದು ವೇಳೆ ಅವಳು ಹಾಗೆ ಮಾಡದಿದ್ದರೆ ಅದು ಅವಳ ಕರ್ತವ್ಯ ಚ್ಯುತಿಯಾಗುತ್ತದೆ'. ಮಕ್ಕಳು, ಕುಟುಂಬ, ಗಂಡ ಅವರ ಸೇವೆ ಮಾಡುವುದು ಹೆಂಡತಿಯ ಜವಾಬ್ದಾರಿಯೆಂಬ ವಿಚಾರದಲ್ಲಿ ನಂಬಿಕೆಯಿಟ್ಟುಕೊಂಡಿರುವ ಜನರು ಇಂದಿಗೂ ಇದ್ದಾರೆಂಬುದಕ್ಕೆ ಮೇಲಿನ ಅಂಕಣಗಾರರ ಲೇಖನವು ಒಂದು ಉತ್ತಮ ನಿದರ್ಶನವಾಗಿದೆ. ಇವರ ವಾದವನ್ನು ಅನುಸರಿಸುವುದಾದರೆ ಮಹಿಳೆಗೆ ಅಕ್ಷರ ಜ್ಞಾನ ಯಾಕೆ ಬೇಕೆಂದರೆ ಅದರಿಂದ ಅವಳು ಉತ್ತಮ ತಾಯಿಯಾಗಬಹುದು ಎಂಬುದಾಗಿದೆ. (ಈ ಬಗ್ಗೆ ವಿವರವಾದ ಚರ್ಚೆಗೆ ನೋಡಿ: ಮಾರ್ತ ನುಸ್‌ಬೌಮ್ ೨೦೦೦:೨೪೨) ಇಲ್ಲಿ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಯೆಂದರೆ ಮಹಿಳೆಗೆ ಒಬ್ಬ ವ್ಯಕ್ತಿಯಾಗಿ ಮತ್ತು ವ್ಯಕ್ತಿಯಾಗಲು ಅಕ್ಷರ ಜ್ಞಾನ ಬೇಡವೆ? ಅರಿಸ್ಟಾಟಲ್ ಹೇಳುವ 'ಸಮೃದ್ಧವಾದ ಜೀವನ' ನಡೆಸಲು ಅವರಿಗೆ ಅಕ್ಷರ ಸಂಸ್ಕೃತಿ ಬೇಡವೆ? ಅವಳಿಗೆ ತನ್ನ ವ್ಯಕ್ತಿತ್ವವನ್ನು, ಕಟ್ಟಿಕೊಳ್ಳಲು ಅಕ್ಷರ ಜ್ಞಾನ ಬೇಡವೆ? ತನ್ನ ಹಿತಾಸಕ್ತಿಗಳಾವುವು ಎಂಬುದನ್ನು ಕಂಡುಕೊಳ್ಳಲು ಮಹಿಳೆಯರಿಗೆ ಸಾಕ್ಷರತೆ ಅಗತ್ಯವಿಲ್ಲವೆ? (ವಿವರಗಳಿಗೆ ನೋಡಿ: ಕರುಣಾ ಚನನಾ:೨೦೦೧). ಮಹಿಳೆಯನ್ನು ಒಬ್ಬ ವ್ಯಕ್ತಿಯಾಗಿ ಒಪ್ಪಿಕೊಳ್ಳಲು ಸಿದ್ಧವಿಲ್ಲದ ಮನೋಸ್ಥಿತಿಯನ್ನು ಪ್ರತಾಪಸಿಂಹರಂತವರ ಬರಹಗಳು ತೋರಿಸುತ್ತವೆ. ಅಂದರೆ ಮಹಿಳೆಯರು ಸ್ವತಂತ್ರವಾಗಿ ತಮ್ಮ ಬದುಕನ್ನು ಕಟ್ಟಿಕೊಳ್ಳುವ ಸ್ಥಿತಿಯಲಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈ ಬಗೆಯ ಮನೋಭಾವವನ್ನು, ಅಂತಹ ವಿಚಾರ ಪ್ರಣಾಳಿಕೆಯನ್ನು ಅಮರ್ತ್ಯಸೇನ್ ಟೀಕಿಸುತ್ತಾರೆ. ತಾನು ಬಯಸಿದಂತೆ ಬದುಕಲು ಸಾಧ್ಯವಿಲ್ಲದ, ತಾನು ಏನಾಗ ಬೇಕೆಂದಿದ್ದಾಳೋ ಅದರಂತಾಗಲು ಸಾಧ್ಯವಿಲ್ಲದ ಸ್ಥಿತಿಯನ್ನು ಇಲ್ಲಿ ಅಸ್ವಾತಂತ್ರ್ಯವೆಂದು ಕರೆಯಬಹುದು. ಈ ಬಗೆಯ ಅಸ್ವಾತಂತ್ರ್ಯವನ್ನು ನಿವಾರಣೆ ಮಾಡುವ ದಿಶೆಯಲ್ಲಿ ಸಾಕ್ಷರತೆಯ ಪಾತ್ರ ನಿರ್ಣಾಯಕವಾದುದಾಗಿದೆ. ಅದು ಮಹಿಳೆಯರಿಗೆ ಧಾರಣಾ ಸಾಮರ್ಥ್ಯವನ್ನು ನೀಡುತ್ತದೆ. ಧಾರಣಾ ಸಾಮರ್ಥ್ಯವನ್ನು ಅಮರ್ತ್ಯಸೇನ್‌ನ ವಿಚಾರ ಪ್ರಣಾಳಿಕೆಯ ಹಿನ್ನೆಲೆಯಲ್ಲಿ 'ಸ್ವಾತಂತ್ರ್ಯ'ವೆಂದು ಕರೆಯಬಹುದು. ಅಂದರೆ ಧಾರಣಾ ಸಾಮರ್ಥ್ಯ ವೆನ್ನುವುದು ಅಮರ್ತ್ಯಸೇನ್ ರೂಪಿಸಿರುವ ಅಭಿವೃದ್ಧಿ ಸಿದ್ಧಾಂತದ ಅಡಿಪಾಯ ವಾಗಿದೆ. ಅವರು ಅನುಭವಿಸುವ ಸ್ವಾತಂತ್ರ್ಯವೆ ಅವರ ಧಾರಣಾ ಸಾಮರ್ಥ್ಯವಾಗಿದೆ. ಒಬ್ಬ ವ್ಯಕ್ತಿಯ ಧಾರಣಾ ಸಾಮರ್ಥ್ಯವೆಂದರೆ ಅದು ಆತನ/ಆಕೆಯ ಸಶಕ್ತೀಕರಣವಾಗಿದೆ. ಅದೇ ಅವರ ಧಾರಣಾ ಸಾಮರ್ಥ್ಯವಾಗಿದೆ.

ಈ ದೃಷ್ಟಿಯಿಂದ ನೋಡಿದಾಗ ನಮ್ಮ ಸಮಾಜದ ಸಂದರ್ಭದಲ್ಲಿ ಮಹಿಳೆಯರು ಅನೇಕ ಬಗೆಯ ಅಸ್ವಾತಂತ್ರ್ಯಗಳಿಂದ ನರಳುತ್ತಿದ್ದಾರೆ. ಅವರ ಧಾರಣಾ ಸಾಮರ್ಥ್ಯವು ಅತ್ಯಂತ ಕೆಳಮಟ್ಟದಲ್ಲಿದೆ. ಮಹಿಳೆಯರು ತಾವೇನಾಗಬೇಕೆಂದಿದ್ದಾರೊ ಅದರಂತಾಗುವುದು ಮತ್ತು ತಾವು ಹೇಗೆ ಬದುಕಬೇಕೆಂದಿದ್ದಾರೋ ಅದರಂತೆ ಬದುಕುವುದು ನಮ್ಮ ಸಮಾಜದ ಸಂದರ್ಭದಲ್ಲಿ ಸಾಧ್ಯವಿಲ್ಲವಾಗಿದೆ. ಅವರ ಧಾರಣಾ ಸಾಮರ್ಥ್ಯವನ್ನು ನಿರ್ಧರಿಸುವ ಬಹುಮುಖ್ಯವಾದ ಸಂಗತಿಯೆಂದರೆ ಅವರ ಸಾಕ್ಷರತೆಯ ಮಟ್ಟ ಮತ್ತು ಅವರ ಶಿಕ್ಷಣವಾಗಿದೆ. ತಾವು ಏನಾಗಬೇಕೆಂದಿದ್ದಾರೋ ಅದರಂತಾಗುವುದಕ್ಕೆ ಪ್ರತಿಯಾಗಿ ಮತ್ತು ತಾವು ಹೇಗೆ ಬದುಕ ಬೇಕೆಂದಿದ್ದಾರೊ ಅದರಂತೆ ಬದುಕುವುದಕ್ಕೆ ಪ್ರತಿಯಾಗಿ ಮತ್ತೊಬ್ಬರ ನಿರೀಕ್ಷೆಗೆ ತಕ್ಕಂತೆ ಮತ್ತು ಮತ್ತೊಬ್ಬರ ಅಗತ್ಯಗಳಿಗೆ ತಕ್ಕಂತೆ ಬದುಕುವುದು ಅವರ ಅಸ್ವಾತಂತ್ರ್ಯವನ್ನು ಮತ್ತು ಅವರ ಧಾರಣಾ ಸಾಮರ್ಥ್ಯವು ಕೆಳಮಟ್ಟದಲ್ಲಿರುವುದನ್ನು ಸೂಚಿಸುತ್ತದೆ. ಈ ಬಗೆಯ ಅಸ್ವಾತಂತ್ರ್ಯವನ್ನು ಮತ್ತು ಅವಕಾಶಗಳನ್ನು ಧಾರಣೆ ಮಾಡಿಕೊಳ್ಳಲು ಸಾಧ್ಯವಿಲ್ಲದ ಸ್ಥಿತಿಯನ್ನು ನಿವಾರಣೆ ಮಾಡುವ ದಿಶೆಯಲ್ಲಿ ಸಾಕ್ಷರತೆಯ ಪಾತ್ರವು ನಿರ್ಣಾಯಕವಾಗಿದೆ. ಈ ದಿಶೆಯಲ್ಲಿ ಕಾರ್ಲ್‌ಮಾರ್ಕ್ಸ್‌ನನ್ನು ಉಲ್ಲೇಖಿಸುತ್ತಾ ಅಮರ್ತ್ಯಸೇನ್ 'ಜನರ ಮೇಲೆ ಸಂದರ್ಭ ಮತ್ತು ಸನ್ನಿವೇಶಗಳು ಸಾಧಿಸಿಕೊಂಡಿರುವ ನಿಯಂತ್ರಣವನ್ನು ಕಿತ್ತು ಹಾಕಿ ಜನರು ಸಂದರ್ಭ ಮತ್ತು ಸನ್ನಿವೇಶವನ್ನು ನಿಯಂತ್ರಿಸುವ ಸ್ಥಿತಿಯನ್ನು ಸಾಧಿಸಿಕೊಳ್ಳುವುದೇ ಸ್ವಾತಂತ್ರ್ಯ'ವೆಂದು ಬರೆಯುತ್ತಾರೆ (ಅಮರ್ತ್ಯಸೇನ್: ೨೦೦೪:೫). ಈ ಬಗೆಯಲ್ಲಿ ಸನ್ನಿವೇಶ ಮತ್ತು ಸಂದರ್ಭಗಳ ಮೇಲೆ ನಿಯಂತ್ರಣ ಸಾಧಿಸಿಕೊಳ್ಳಲು ಸಾಕ್ಷರತೆ ತುಂಬಾ ಅಗತ್ಯ.

ಮಹಿಳೆಯರ ಬಗ್ಗೆ ಮತ್ತು ಮಹಿಳೆಯರ ಸಾಕ್ಷರತೆ ಬಗ್ಗೆ ಸಮಾಜದಲ್ಲಿ ನೆಲೆಯೂರಿರುವ ತಾರಮತ್ಯವಾದಿ ಮನೋಭಾವವನ್ನು ಪ್ರತಾಪಸಿಂಹರಂತಹ ಅಂಕಣಗಾರರ ವಿಚಾರಗಳಿಂದ ತಿಳಿದುಕೊಳ್ಳಬಹುದು. ಇದು ಅತ್ಯಂತ ತಿಳುವಳಿಕೆಯಿರುವ ಜನರೆಂದು ಭಾವಿಸಿರುವವರಲ್ಲೂ (ಅಂದರೆ ಪತ್ರಿಕೆಯೊಂದರ ಅಂಕಣಗಾರ ಪ್ರತಾಪ ಸಿಂಹ ಅಂತವರಲ್ಲೂ) ನೆಲೆಯೂರಿದೆಯೆಂಬುದೆ ನಮ್ಮ ಮುಂದಿರುವ ದುರಂತವಾಗಿದೆ.

ಈ ಬಗೆಯ ಮಹಿಳೆಯರ ಬಗೆಗಿನ ತಾರತಮ್ಯವಾದಿ ದೃಷ್ಟಿಕೋನವನ್ನು ಅಳಿಸಿಹಾಕುವ ದಿಶೆಯಲ್ಲಿ ಅಮರ್ತ್ಯಸೇನ್ ಬಹಳಷ್ಟು ಕೆಲಸ ಮಾಡಿದ್ದಾರೆ. ಮಹಿಳೆಯನ್ನು ಒಬ್ಬ ವ್ಯಕ್ತಿಯನ್ನಾಗಿ ನೋಡುವ ಅಗತ್ಯವನ್ನು ಹಾಗೂ ಅವಳಿಗೆ ವ್ಯಕ್ತಿಯಾಗಿ ತನ್ನದೇ ಆದ ಹಿತಾಸಕ್ತಿಗಳಿರಬಹುದು ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಅರಿಸ್ಟಾಟಲ್, ಇಮ್ಯಾನ್ಯುಯಲ್ ಕಾಂಟ್, ಆಡಂಸ್ಮಿತ್, ಕಾರ್ಲ್‌ಮಾರ್ಕ್ಸ್ ಮುಂತಾದ ವಿದ್ವಾಂಸರ ವಿಚಾರಗಳನ್ನು ಉಲ್ಲೇಖಿಸುತ್ತ ಅವರು ಸಾಕ್ಷರತೆಯೆಂಬುದು ಮತ್ತಾವುದನ್ನೋ ಸಾಧಿಸಿಕೊಳ್ಳಲು ಅಗತ್ಯವಾದ ಒಂದು ಸಾಧನವಾಗಿ ನೋಡುವ ಕ್ರಮವನ್ನು ತಿರಸ್ಕರಿಸಿದ್ದಾರೆ.

ಅರಿಸ್ಟಾಟಲ್ ಹೇಳುವ 'ಸಮೃದ್ಧವಾದ ಬದುಕನ್ನು' (flourishing life) ಸಾಧಿಸಿಕೊಳ್ಳಲು ಸಾಕ್ಷರತೆಯು ಅಗತ್ಯ ಎಂಬುದನ್ನು ಸೆನ್ ನಮಗೆ ತಿಳಿಸಿಕೊಟ್ಟಿದ್ದಾರೆ (ವಿವರವಾದ ಚರ್ಚೆಗೆ ನೋಡಿ: ಇರನಿ ವಾನ್ ಸ್ಟೆವರೆನ್:೨೦೦೪:೮೬-೮೭) ಆಡಂಸ್ಮಿತ್ ಹೇಳುವಂತೆ 'ಸಮ್ಮಾನವನ್ನು ಕಳೆದು ಕೊಳ್ಳದ ರೀತಿಯಲ್ಲಿ ಜನರ ಜೊತೆಯಲ್ಲಿ ಮುಕ್ತವಾಗಿ ಬೆರೆಯಲು ಅಕ್ಷರ ಸಂಸ್ಕೃತಿಯ ಅಗತ್ಯವಿದೆ'. ಇಮ್ಯಾನುಯಲ್ ಕಾಂಟ್‌ನನ್ನು ಉಲ್ಲೇಖಿಸುತ್ತ "ಜನಸ್ತೋಮವನ್ನು ಯಾವತ್ತೂ ವೈಯುಕ್ತಿಕವಾಗಿಯಾಗಲಿ ಅಥವಾ ಸಾಮುದಾಯಿಕ ವಾಗಿಯಾಗಲಿ 'ಸಾಧನ'ವಾಗಿ ನೋಡುವುದಕ್ಕೆ ಪ್ರತಿಯಾಗಿ 'ಅಂತಿಮ ಗುರಿ'ಯಾಗಿಯೇ" ನೋಡಬೇಕೆಂಬುದನ್ನು ಸೆನ್ ತೋರಿಸಿಕೊಟ್ಟಿದಾರೆ. ಈ ಮಾತು ಮಹಿಳೆಯರ ಸಾಕ್ಷರತೆಗೂ ಅನ್ವಯಿಸುತ್ತದೆ. ಅಮರ್ತ್ಯಸೇನ್ ಪ್ರಕಾರ ಸಾಕ್ಷರತೆ ಮತ್ತು ಶಿಕ್ಷಣವು ಜನರ ಧಾರಣಾ ಶಕ್ತಿಯನ್ನು ನಿರ್ಧರಿಸುವ ಬಹುಮುಖ್ಯವಾದ ಸೂಚಿಗಳಾಗಿವೆ. ಜನರು 'ಏನಾಗಿದ್ದಾರೆ ಮತ್ತು ಅವರು ಏನು ಮಾಡ ಬಲ್ಲರು' ಎಂಬುದು ಬಹಳ ಮಟ್ಟಿಗೆ ಸಾಮಾಜಿಕ ಸೂಚಿಗಳ ಮಟ್ಟವನ್ನು ಅವಲಂಬಿಸಿದೆ. ಜನರು ತಾವು ಏನನ್ನು ಮಾಡಬೇಕೆಂದಿದ್ದಾರೋ ಅದನ್ನು ಮಾಡುವ ಸಾಮರ್ಥ್ಯ ಮತ್ತು ಅವರು ಏನಾಗ ಬೇಕೆಂದಿದ್ದಾರೋ ಅದರಂತಾಗುವ ಸಾಮರ್ಥ್ಯವನ್ನು ಸೆನ್ ಸ್ವಾತಂತ್ರ್ಯವೆಂದು ಕರೆದಿದ್ದಾರೆ. ಸಾಕ್ಷರತೆಯು ಅಂತಹ ಬಹು ಮುಖ್ಯವಾದ ಒಂದು ಸಾಮಾಜಿಕ ಸೂಚಿಯಾಗಿದೆ. ಜೀನ್ ಡ್ರೀಜ್ ಮತ್ತು ಅಮರ್ತ್ಯಸೇನ್ ಕೂಡಿ ರಚಿಸಿರುವ 'ಇಂಡಿಯಾ :ಡೆವಲಪ್‌ಮೆಂಟ್ ಆಂಡ್ ಪಾರ್ಟಿಸಿಪೇಶನ್' (೨೦೦೨) ಎಂಬ ಕೃತಿಯಲ್ಲಿ ಅಭಿವೃದ್ಧಿ ಯಲ್ಲಿ ಸಾಕ್ಷರತೆಯ ಪಾತ್ರವನ್ನು ಐದು ನೆಲೆಗಳಲ್ಲಿ ಗುರುತಿಸಿದ್ದಾರೆ.

### ೧. ಅಂತಸ್ಥವಾದಿ ಮಹತ್ವ

ಅಕ್ಷರ ಜ್ಞಾನ ಮತ್ತು ಶಿಕ್ಷಣ ಅವುಗಳಷ್ಟಕ್ಕೆ ಅವು ಮಹತ್ವ ಪಡೆದಿರುವ ಸಂಗತಿಗಳಾಗಿವೆ. ಸಾಕ್ಷರತೆಯು ಒದಗಿಸುವ ಅವಕಾಶಗಳನ್ನು ಪಡೆಯುವುದರ ಮೂಲಕ ಜನರು ತಮ್ಮ ಧಾರಣಾ ಸಾಮರ್ಥ್ಯವನ್ನು ಉತ್ತಮಪಡಿಸಿಕೊಳ್ಳಬಹುದು. ತಮ್ಮ ಸ್ವಾತಂತ್ರ್ಯದ ವ್ಯಾಪ್ತಿಯನ್ನು ವಿಸ್ತೃತಗೊಳಿಸಿಕೊಳ್ಳಬಹುದು. ಶಿಕ್ಷಣವು ಜನರ ಸ್ವಾಭಿಮಾನವನ್ನು, ಆತ್ಮಗೌರವವನ್ನು ಮತ್ತು ಸಾಮಾಜಿಕ ಸಹಭಾಗಿತ್ವವನ್ನು ಉತ್ತಮಪಡಿಸುತ್ತದೆ. ಒಬ್ಬ ವ್ಯಕ್ತಿಯಾಗಿ ಮಹಿಳೆಗೆ ಅಕ್ಷರ ಸಂಸ್ಕೃತಿಯಿಂದ ಘನತೆ ಮತ್ತು ಮನ್ನಣೆ ದೊರೆಯುತ್ತದೆ.

### ೨. ವೈಯುಕ್ತಿಕ ಉಪಕರಣವಾದಿ ಪಾತ್ರ

ಅಕ್ಷರಸ್ಥರಾಗುವುದೆಂದರೆ ಕೇವಲ ಅಕ್ಷರಸ್ಥರಾಗುವುದಲ್ಲ. ಅದು ಇತರೆ ಅನೇಕ ಬಗೆಯ ಪೂರಕ ಅನುಕೂಲಗಳನ್ನು ಒದಗಿಸುತ್ತದೆ. ಅದು ತನ್ನಷ್ಟಕ್ಕೆ ತಾನು ಮಹತ್ವ ಪಡೆದಿದೆ. ಅಕ್ಷರ ಜ್ಞಾನದಿಂದ ಮತ್ತು ಶಿಕ್ಷಣದಿಂದ ಜನರಿಗೆ ಉದ್ಯೋಗ ಪಡೆಯುವುದು ಸುಲಭವಾಗಬಹುದು. ಸಮಾಜದಲ್ಲಿ ಒದಗಿ ಬರುವ ಅವಕಾಶಗಳನ್ನು ಅಕ್ಷರಸ್ಥರು ತಮ್ಮದನ್ನಾಗಿಸಿ ಕೊಳ್ಳುವುದು ಸಾಧ್ಯವಾಗಬಹುದು. ಯಾವುದನ್ನು ಅರಿಸ್ಟಾಟಲ್ 'ಸಮೃದ್ಧ

ಜೀವನ'ವೆಂದು ಹೇಳಿದ್ದಾನೊ ಅದನ್ನು ಪಡೆದುಕೊಳ್ಳಲು ಹಾಗೂ ಸಾಧಿಸಿಕೊಳ್ಳಲು ಅಕ್ಷರ ಜ್ಞಾನವು ನೆರವಾಗುತ್ತದೆ.

## ೩. ಸಾಮಾಜಿಕ ಉಪಕರಣವಾದಿ ಪಾತ್ರ

ಸಾಮಾಜಿಕ ಅಗತ್ಯಗಳನ್ನು ಮತ್ತು ಸಾಮಾಜಿಕ ಸಂಗತಿಗಳನ್ನು ಸಾರ್ವಜನಿಕವಾಗಿ ಚರ್ಚೆ ಮಾಡಲು ಅಗತ್ಯವಾದ ಸಾಮರ್ಥ್ಯವನ್ನು ಅಕ್ಷರ ಜ್ಞಾನವು ನೀಡುತ್ತದೆ. ಜಾಗೃತ ರೀತಿಯಲ್ಲಿ ಸಾಮೂಹಿಕ ಹಕ್ಕೊತ್ತಾಯಗಳನ್ನು ಮಂಡಿಸಲು ಇದರಿಂದ ಸಾಧ್ಯವಾಗುತ್ತದೆ. ಸಾರ್ವಜನಿಕ ಸೌಲಭ್ಯಗಳನ್ನು ವಿಸ್ತೃತಗೊಳಿಸಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ. ಸಾರ್ವಜನಿಕ ಸೌಲಭ್ಯ ಗಳನ್ನು ಪರಿಣಾಮಕಾರಿಯಾಗಿ ಮತ್ತು ಗರಿಷ್ಟ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಪ್ರಜಾಪ್ರಭುತ್ವದ ಅನುಷ್ಠಾನಕ್ಕೆ ಮತ್ತು ಅದರ ಆಚರಣೆಗೆ ಅಕ್ಷರ ಸಂಸ್ಕೃತಿಯು ತುಂಬಾ ಅಗತ್ಯವಾಗಿದೆ. ಸಾಮಾಜಿಕ ಸಂಗತಿ ಕುರಿತಂತೆ ಚರ್ಚೆಯು ಇದರಿಂದ ಸಾಧ್ಯವಾಗುತ್ತದೆ.

## ೪. ಪ್ರಕ್ರಿಯಾತ್ಮಕ ಉಪಕರಣವಾದಿ ಪಾತ್ರ

ಶಾಲೆಗೆ ಹೋಗುವ ಪ್ರಕ್ರಿಯೆಯಿಂದ ಜನರಿಗೆ ಔಪಚಾರಿಕ ಶಿಕ್ಷಣದ ಜೊತೆಗೆ ಇತರೆ ಅನೇಕ ಬಗೆ ಅನುಕೂಲಗಳು ದೊರೆಯುತ್ತವೆ. ಮಕ್ಕಳು ೧೫ ವರ್ಷದವರೆಗೆ ಶಾಲೆಗೆ ಹೋಗುವುದರಿಂದ ಬಾಲ ಕಾರ್ಮಿಕ ಸಮಸ್ಯೆನ್ನು ನಿವಾರಿಸಬಹುದು ಮತ್ತು ಮಹಿಳೆಯರ ಬಾಲ ವಿವಾಹ ಪದ್ಧತಿಯನ್ನು ತಡೆಗಟ್ಟಬಹುದು. ಶಾಲೆಗೆ ಮಕ್ಕಳು ಹೋಗುವುದರಿಂದ ಅವರಿಗೆ ಇತರರ ಪರಿಚಯವಾಗುತ್ತದೆ ಮತ್ತು ಇವರಿಂದ ಅವರ ದೃಷ್ಟಿಕೋನ ಬದಲಾಗಬಹುದಾಗಿದೆ. ಇದು ಎಳೆಯ ಪ್ರಾಯದ ಹುಡುಗಿಯರ ದೃಷ್ಟಿಯಿಂದ ಬಹಳ ಮುಖ್ಯವಾಗಿದೆ.

## ೫. ಸಶಕ್ತೀಕರಣವಾದಿ ಮತ್ತು ವಿತರಣಾವಾದಿ ಪಾತ್ರ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರು ರಾಜಕೀಯವಾಗಿ ಸಂಘಟಿತರಾಗಲು, ಶೋಷಣೆ ವಿರುದ್ಧ ಹೋರಾಟ ಮಾಡಲು ಮತ್ತು ಸಾಮಾಜಿಕ ನ್ಯಾಯವನ್ನು ಒತ್ತಾಯಿಸಲು ಅಕ್ಷರ ಜ್ಞಾನ ಮತ್ತು ಶಿಕ್ಷಣದಿಂದ ಸಾಧ್ಯವಾಗುತ್ತದೆ. ಕುಟುಂಬದ ಹೊರಗೆ ಮಾತ್ರವಲ್ಲದೆ ಕುಟುಂಬದ ಒಳಗೆ ಸಶಕ್ತೀಕರಣ ಮತ್ತು ವಿತರಣವಾದಿ ಪಾತ್ರವು ಅನೇಕ ಅನುಕೂಲಗಳನ್ನು ಒದಗಿಸಬಲ್ಲದು. ಏಕೆಂದರೆ ಲಿಂಗಸಂಬಂಧಿ ಅಸಮಾನತೆಯ ಸಮಸ್ಯೆಯು ಕುಟುಂಬದೊಳಗೆ ಅಧಿಕವಾಗಿದೆ ಎಂಬ ಅಂಶ ಈಗ ನಿಚ್ಚಳವಾಗಿ ತಿಳಿದುಬಂದಿದೆ (ಮಾರ್ತ ನುಸಬೌಮ್: ೨೦೦೦: ೨೪೨). ಅಕ್ಷರ ಜ್ಞಾನ ಮತ್ತು ಶಿಕ್ಷಣವು ಕೇವಲ ಅದನ್ನು ಪಡೆದುಕೊಂಡ ಮನುಷ್ಯರಿಗೆ ಮಾತ್ರ ಅನುಕೂಲಗಳನ್ನು ಒದಗಿಸುವುದಿಲ್ಲ. ಅದರ ರಾಜಕೀಯ ಪರಿಣಾಮಗಳು ವಿಸ್ತೃತವಾಗಿರುತ್ತವೆ. ಹಿಂದುಳಿದ ಸಮುದಾಯದಲ್ಲಿ ಅಕ್ಷರಸ್ಥರ ಗುಂಪು ತಮ್ಮ ಜನ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ಹೋರಾಟ ಮಾಡಲು ಅಗತ್ಯವಾದ ತಿಳುವಳಿಕೆಯನ್ನು ಶಿಕ್ಷಣವು ಜನರಿಗೆ ಒದಗಿಸುತ್ತದೆ.

ಜೀನ್ ಡ್ರೀಜ್ ಮತ್ತು ಅಮರ್ತ್ಯಸೇನ್ ಅವರು ಭಾರತದ ಅಭಿವೃದ್ಧಿ ಕುರಿತಂತೆ ರಚಿಸಿರುವ ಕೃತಿಯಲ್ಲಿ ಸಾಕ್ಷರತೆಯ ಮಹತ್ವವನ್ನು ಹೀಗೆ ಹಿಡಿದಿಟ್ಟಿದ್ದಾರೆ. 'ಸಾಮಾಜಿಕ ಸಂಬಂಧಗಳು ಮತ್ತು ಸಂಪರ್ಕಗಳು ಲಿಖಿತ ಮಾಧ್ಯಮದ ಮೂಲಕ ನಡೆಯುವುದರಿಂದ ಸಮಾಜದಲ್ಲಿ ಸಾಕ್ಷರತೆಯು ಆತ್ಮರಕ್ಷಣೆಯ ಸಾಧನವಾಗಿರುತ್ತದೆ. ಅಕ್ಷರ ಜ್ಞಾನವಿಲ್ಲದವರು ತಮ್ಮನ್ನು ತಾವು ನ್ಯಾಯಾಲಯದಲ್ಲಿ ರಕ್ಷಿಸಿಕೊಳ್ಳಲಾರರು. ಬ್ಯಾಂಕಿನಿಂದ ಸಾಲ ಎತ್ತಲಾರರು. ತಮ್ಮ ವಾರಸುದಾರಿಕೆ ಹಕ್ಕುಗಳನ್ನು ಚಲಾಯಿಸಲಾರರು. ಆಧುನಿಕ ತಂತ್ರಜ್ಞಾನದ ಲಾಭ ಪಡೆದುಕೊಳ್ಳಲಾರರು. ಉದ್ಯೋಗ ಮಾರುಕಟ್ಟೆಯಲ್ಲಿ ಅವರು ಸ್ಪರ್ಧೆ ಮಾಡಲಾರರು. ಸರಿಯಾದ ಬಸ್ಸು ಏರಲಾರರು. ರಾಜಕೀಯ ಚಟುವಟಿಕೆ ಗಳಲ್ಲಿ ಭಾಗವಹಿಸಲಾರರು. ಒಟ್ಟಾರೆ ಆರ್ಥಿಕತೆ ಮತ್ತು ಸಮಾಜದಲ್ಲಿ ಯಶಸ್ವೀ ಪಾಲುದಾರರಾಗಲಾರರು (೨೦೦೨:೧೪೩).

ಲಿಂಗ ಸಮಾನತೆಯನ್ನು ಸಾಧಿಸಿಕೊಳ್ಳುವ ದಿಶೆಯಲ್ಲಿ ಅಕ್ಷರ ಜ್ಞಾನದ ಮತ್ತು ಶಿಕ್ಷಣದ ಪಾತ್ರ ತುಂಬಾ ಮಹತ್ವದ್ದಾಗಿದೆ. ಒಬ್ಬ ಒಳ್ಳೆಯ ತಾಯಿಯಾಗಲು ಮಹಿಳೆಗೆ ಸಾಕ್ಷರತೆ ಮತ್ತು ಶಿಕ್ಷಣ ಅಗತ್ಯ, ನಿಜ. ಆದರೆ ಅದಕ್ಕಿಂತ ಮುಖ್ಯವಾಗಿ ಅವಳು ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಕೂಡ ಸಾಕ್ಷರತೆಯ ಅಗತ್ಯವಿದೆ. ಮತ್ತೊಬ್ಬರ ನಿರೀಕ್ಷೆಗೆ ತಕ್ಕಂತೆ ಮಾತ್ರ ಅವಳು ಬದುಕಬೇಕೆಂದು ಬಯಸುವುದು ತಪ್ಪಾಗುತ್ತದೆ. ಮಹಿಳೆ ತಾನು ಏನಾಗಬೇಕೆಂದು ಬಯಸುತ್ತಾಳೊ ಅದರಂತಾಗಲು ಅವಶ್ಯಕವಾದ ಅವಕಾಶ ಗಳನ್ನು ಒದಗಿಸಬೇಕಾಗುತ್ತದೆ. ಸಾಕ್ಷರತೆಯು ಅಂತಹ ಅವಕಾಶವನ್ನು ಮಹಿಳೆಗೆ ಒದಗಿಸಬಲ್ಲುದಾಗಿದೆ. ಅಮರ್ತ್ಯಸೇನ್ ಶಿಕ್ಷಣವನ್ನು 'ಅವಕಾಶ'ವೆಂದು ಪರಿಗಣಿಸುತ್ತಾನೆ. ಅವಕಾಶಗಳ ವರ್ಧನೆಯು ಅಭಿವೃದ್ಧಿ ಯೆಂದಾದರೆ ಶಿಕ್ಷಣದ ವರ್ಧನೆಯು ಅಭಿವೃದ್ಧಿಯ ಒಂದು ಭಾಗವೇ ಆದಂತಾಗುತ್ತದೆ. ಅನೇಕ ಅಧ್ಯಯನಗಳು ದೃಢಪಡಿಸುವಂತೆ ವಿಶ್ವದ ಯಾವುದೇ ದೇಶದಲ್ಲೂ ಪುರುಷರಿಗೆ ಸಮಾನವಾದ ಸ್ಥಾನಮಾನವನ್ನು ಮಹಿಳೆಯರಿಗೆ ನೀಡಿಲ್ಲ. ಆದರೆ ಇದು ಬಹಳ ಮುಖ್ಯವಾದ ಸಂಗತಿಯಾಗಿದೆ. ಮಾರ್ತ ನುಸ್‌ಬೌಮ್ (೨೦೦೮:೦೪) ಹೇಳುವಂತೆ ಬಡತನ ಮತ್ತು ಅಭಿವೃದ್ಧಿಯ ಸಮಸ್ಯೆಗಳನ್ನು ಸರಿಯಾಗಿ ಎದುರಿಸಲು ಮತ್ತು ಅರ್ಥ ಮಾಡಿಕೊಳ್ಳಲು ಬಹಳ ಮುಖ್ಯವಾಗಿ ನಾವು ಸಮಾಜದಲ್ಲಿ ಮಹಿಳೆಯರು ಎದುರಿಸುವ ಸಮಸ್ಯೆಗಳ ಬಗ್ಗೆ ಹೆಚ್ಚಿನ ಗಮನ ನೀಡಬೇಕಾಗುತ್ತದೆ. ಜೀನ್ ಡ್ರೀಜ್ ಮತ್ತು ಅಮರ್ತ್ಯಸೇನ್ ಸೇರಿ ರಚಿಸಿರುವ ಭಾರತ ಕುರಿತ ಅಧ್ಯಯನದಲ್ಲಿ (೨೦೦೨) ಲಿಂಗ ಸಮಾನತೆ ಮತ್ತು ಸಾಮಾಜಿಕ ಪ್ರಗತಿಗಳ ನಡುವಿನ ಸಂಬಂಧ ಕುರಿತು ವಿವರವಾಗಿ ಚರ್ಚೆ ಮಾಡಿದ್ದಾರೆ. ಅವರ ಪ್ರಕಾರ ಲಿಂಗ ಅಸಮಾನತೆ ಮತ್ತು ಮಹಿಳೆಯ ದುಸ್ಥಿತಿ ಭಾರತವು ಎದುರಿಸುತ್ತಿರುವ ಬಹು ದೊಡ್ಡ ಸಾಮಾಜಿಕ ವೈಫಲ್ಯವಾಗಿದೆ. ಎರಡನೆಯದಾಗಿ ದೇಶದ ವರಮಾನವು ವರ್ಧಿಸಿದಂತೆ ಲಿಂಗ ಅಸಮಾನತೆ ತನ್ನಷ್ಟಕ್ಕೆ ತಾನೆ ಕಡಿಮೆಯಾಗಿ

ಬಿಡುವುದಿಲ್ಲ. ಆದ್ದರಿಂದ ಅದರ ಸಾಧನೆಗಾಗಿ ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸ ಬೇಕಾಗುತ್ತದೆ (ಅಮರ್ತ್ಯಸೇನ್:೨೦೦೪:೩). ಮೂರನೆಯದಾಗಿ ಲಿಂಗ ಅಸಮಾನತೆ ಯೆಂಬುದು ಕೇವಲ ಸಾಮಾಜಿಕ ವೈಫಲ್ಯವಷ್ಟೆ ಅಲ್ಲ. ಅದು ಅನೇಕ ಬಗೆಯ ಇತರೆ ವೈಫಲ್ಯಗಳಿಗೆ ಕಾರಣವಾಗುತ್ತದೆ. ಮಕ್ಕಳ ಮರಣ ಪ್ರಮಾಣವನ್ನು ಕಡಿಮೆಗೊಳಿಸುವಲ್ಲಿ ಲಿಂಗ ಸಮಾನತೆಯ ಪಾತ್ರವು ತುಂಬಾ ನಿರ್ಣಾಯಕವಾಗಿರುತ್ತದೆ. ಅಭಿವೃದ್ಧಿ ಕುರಿತ ಸಿದ್ಧಾಂತಗಳಲ್ಲಿ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಸಂಗತಿಯೆಂದರೆ ಸಾಮಾಜಿಕ ಬದಲಾವಣೆಯಲ್ಲಿ ಮಹಿಳೆಯರ ಪಾತ್ರವಾಗಿದೆ. ಅಭಿವೃದ್ಧಿಯ ಬಲಿಪಶುಗಳಾಗಿ ಮಹಿಳೆಯರು ಅನೇಕ ಬಗೆಯ ತಾರತಮ್ಯಗಳನ್ನು ಅನುಭವಿಸುತ್ತಿದ್ದಾರೆ. ಮಹಿಳೆಯರ ಅಧೀನ ಸ್ಥಿತಿಯಿಂದಾಗಿ ಕೇವಲ ಮಹಿಳೆಯರು ಮಾತ್ರವಲ್ಲ, ಅದಕ್ಕೆ ಪ್ರತಿಯಾಗಿ ಸಮಾಜದ ಎಲ್ಲ ವರ್ಗದ ಜನರು ಇದರಿಂದ ದುಷ್ಪರಿಣಾಮ ಅನುಭವಿಸಬೇಕಾಗಿದೆ. ಮಹಿಳೆಯರ ವಿಮುಕ್ತಿಯು ಕೇವಲ ಮಹಿಳೆಯರಿಗೆ ಮಾತ್ರ ಸಂಬಂಧಿಸಿದ ಸಂಗತಿಯಲ್ಲ, ಅದು ಸಾಮಾಜಿಕ ಪ್ರಗತಿಯ ಅವಿಭಾಜ್ಯ ಅಂಗವಾಗಿದೆ. ಈ ದಿಶೆಯಲ್ಲಿ ಮಹಿಳೆಯರ ಸಾಕ್ಷರತೆಯ ಪಾತ್ರವು ಬಹಳ ಮಹತ್ವದ್ದಾಗಿದೆ. ಲಿಂಗ ಅಸಮಾನತೆಯ ದುಷ್ಪರಿಣಾಮ ಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಅಕ್ಷರ ಸಂಸ್ಕೃತಿಯ ಅಗತ್ಯವಿದೆ. 'ದಕ್ಷಿಣ ಏಷ್ಯಾದಲ್ಲಿ ಮಾನವ ಅಭಿವೃದ್ಧಿ' ಎಂಬ ಕೃತಿಯಲ್ಲಿ ಮೆಹಬೂಬ್ ಉಲ್ ಹಕ್ ಮತ್ತು ಖಿದೀಜ ಹಕ್ (೧೯೯೮) ಅವರು ಜನರಿಗೆ ಶಿಕ್ಷಣವಿಲ್ಲದಿದ್ದರೆ ಅಭಿವೃದ್ಧಿಯು ವಿಸ್ತೃತವೂ, ಸುಸ್ಥಿರಗತಿಯೂ ಮತ್ತು ಜನರನ್ನು ಒಳಗೊಳ್ಳುವ ರೀತಿಯದೂ ಆಗಲು ಸಾಧ್ಯವಿಲ್ಲವೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರವನ್ನು ಅವರು ಹೀಗೆ ಹಿಡಿದಿಟ್ಟಿದ್ದಾರೆ.

೧. ಶಿಕ್ಷಣವು ಒಳ್ಳೆಯ ಆರೋಗ್ಯ ಪಾಲನೆಗೆ ತುಂಬಾ ಅಗತ್ಯವಾಗಿದೆ. ಅದರಲ್ಲೂ ಮಹಿಳೆಯರ ದೃಷ್ಟಿಯಿಂದ ಇದು ಬಹಳ ಮುಖ್ಯವಾದುದಾಗಿದೆ.
೨. ಅದು ಜನಸಂಖ್ಯಾ ಬೆಳವಣಿಗೆ ಪ್ರಮಾಣವನ್ನು ಕಡಿಮೆ ಮಾಡಬಲ್ಲುದಾಗಿದೆ.
೩. ಅದು ಬಡತನದ ಪ್ರಮಾಣವನ್ನು ಕಡಿಮೆ ಮಾಡಬಲ್ಲುದು.
೪. ಅದು ವರಮಾನಕ್ಕೆ ಸಂಬಂಧಿಸಿದ ಅಸಮಾನತೆಯನ್ನು ಕಡಿಮೆ ಮಾಡಬಲ್ಲುದು.
೫. ಅದು ಸೌಹಾರ್ದಯುತ ಬದುಕಿನ ಮತ್ತು ರಾಷ್ಟ್ರೀಯ ಅನನ್ಯತೆಯ ಅಂತರ್ಗತ ಭಾಗವಾಗಿದೆ.
೬. ಅದು ಜನರನ್ನು ಸಶಕ್ತರನ್ನಾಗಿಸುತ್ತದೆ.

**ಮಹಿಳಾ ಸಾಕ್ಷರತೆಯಿಂದ ಮಹಿಳಾ ಅಧ್ಯಯನದವರೆಗೆ.....**

ಮಹಿಳೆಯರ ಅಭಿವೃದ್ಧಿ ಕುರಿತಂತೆ ಚರ್ಚೆ ಮಾಡುವಾಗ ನಾವು ಸೂಕ್ಷ್ಮವಾಗಿ ಗಮನಿಸ ಬೇಕಾದ ಸಂಗತಿಯೆಂದರೆ ಚಾರಿತ್ರಿಕವಾಗಿ ಮಹಿಳೆಯರ ಕುರಿತ ಚರ್ಚೆ

ಪ್ರಾರಂಭವಾಗುವುದೆ ಮಹಿಳೆಯರ ಶಿಕ್ಷಣದ ಒತ್ತಾಯದಿಂದ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಸ್ವಾತಂತ್ರ್ಯಪೂರ್ವದಲ್ಲಿ ಮಹಿಳೆಯರ ಶಿಕ್ಷಣದ ಬಗ್ಗೆ ಜನ ಜಾಗೃತಿ ಹಾಗೂ ಒತ್ತಡ ಅಧಿಕವಾಗಿತ್ತು, ಬ್ರಿಟಿಷರ ಆಳ್ವಿಕೆಯು ಅದಕ್ಕೆ ಅಗತ್ಯವಾದ ಅಡಿಪಾಯವನ್ನು ಒದಗಿಸಿಕೊಟ್ಟಿತು. ವೇದ ಕಾಲದಿಂದ ಬ್ರಿಟಿಷರ ಆಗಮನದವರೆಗೆ ಮಹಿಳೆಯರ ಶಿಕ್ಷಣವೆನ್ನುವುದು ಉನ್ನತ ವರ್ಗದ ಮಾನಾಪಲಿಯಾಗಿತ್ತು, ವೇದಗಳ ಸಮರ್ಥಕರು ಮತ್ತು 'ಭಾರತೀಯವೆನ್ನುವುದೆಲ್ಲ ಬಂಗಾರ' ವೆನ್ನುವವರೆಲ್ಲರು ಮೈತ್ರೇಯಿ, ಗಾರ್ಗಿ ಮುಂತಾದವರ ಹೆಸರುಗಳನ್ನು ಹೇಳುತ್ತಾರೆ. ಆದರೆ ಅವರ ಪಟ್ಟಿಯು ಅಂತಹ ನಾಲ್ಕಾರು ಹೆಸರುಗಳಿಗಿಂತ ಹೆಚ್ಚಿಗೆ ಮುಂದುವರಿಯುವುದಿಲ್ಲ. ಮಹಿಳೆಯರ ಸಾಕ್ಷರತೆಯೆಂಬುದು ಭಾರತದ ಸಂದರ್ಭದಲ್ಲಿ ಇಪ್ಪತ್ತನೆಯ ಶತಮಾನದ ಬೆಳವಣಿಗೆಯಾಗಿದೆ.

ಭಾರತದಲ್ಲಿ ಮಹಿಳೆಯರ ಶಿಕ್ಷಣಕ್ಕೆ ಆದ್ಯತೆಯು ದೊರೆಯದುದಕ್ಕೆ ಡ್ರೀಜ್ ಮತ್ತು ಸೆನ್ ನೀಡುವ ಮೂರು ಕಾರಣಗಳು ಹೀಗಿವೆ.

೧. ಲಿಂಗಸಂಬಂಧಿ ಶ್ರಮ ವಿಭಜನೆಯಿಂದಾಗಿ ಶಿಕ್ಷಣದಿಂದ ದೊರೆಯಬಹುದಾದ ನಿರೀಕ್ಷಿತ ಲಾಭಗಳು ಜನರಿಗೆ ಅತ್ಯಂತ ಕಡಿಮೆಯೆಂದು ಕಾಣುತ್ತವೆ. ಏಕೆಂದರೆ ಬಾಲಕಿಯರು ಸಾಮಾನ್ಯವಾಗಿ ನಮ್ಮ ಸಂದರ್ಭದಲ್ಲಿ ಮನೆ ವಾರ್ತೆ ಮತ್ತು ಮಕ್ಕಳ ಲಾಲನೆಯ ಪಾಲನೆಯ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಇದರಿಂದಾಗಿ ಹಿರಿಯರಿಗೆ ಮಹಿಳೆಯರ ಶಿಕ್ಷಣವು ಮಹತ್ವದ್ದಾಗಿ ಕಾಣುವುದಿಲ್ಲ.
೨. ಭಾರತದಲ್ಲಿರುವ ಪಿತೃಪ್ರಧಾನ ವಾರಸುದಾರಿಕೆಯಿಂದಾಗಿ ಪಾಲಕರು ಮಹಿಳೆಯ ಶಿಕ್ಷಣಕ್ಕೆ ಎಷ್ಟು ಮಹತ್ವ ನೀಡಬೇಕೋ ಅಷ್ಟು ಮಹತ್ವ ನೀಡುತ್ತಿಲ್ಲ. ಏಕೆಂದರೆ 'ಮಹಿಳೆಗೆ ಶಿಕ್ಷಣ ಕೊಡಿಸುವುದೆಂದರೆ ಪಕ್ಕದ ಮನೆಯ ಗಿಡಕ್ಕೆ ನೀರೆರೆದಂತೆ' ಎಂಬ ನಾಣ್ಣುಡಿ ಜನರಲ್ಲಿ ಗಟ್ಟಿಯಾಗಿ ನೆಲೆಗೊಂಡು ಬಿಟ್ಟಿದೆ.
೩. ಸಮಾಜದಲ್ಲಿ ಕಂಡುಬರುತ್ತಿರುವ ವರದಕ್ಷಿಣೆ, ಉನ್ನತ ವರ್ಗದ ಗಂಡಿನೊಂದಿಗೆ ವಿವಾಹ ಮುಂತಾದವು ಮಹಿಳೆಯರ ಶಿಕ್ಷಣಕ್ಕೆ ವಿರುದ್ಧವಾಗಿ ಕೆಲಸ ಮಾಡಬಲ್ಲುವಾಗಿವೆ. ಇಂದು ಮಹಿಳೆಯರಿಗೆ ಶಿಕ್ಷಣ ಕೊಡಿಸಲು ಜನರು ಯಾಕೆ ಮುಂದೆ ಬರುತ್ತಿದ್ದಾರೆಂದರೆ ಅದರಿಂದ ಅವಳಿಗೆ ಒಳ್ಳೆಯ ಗಂಡು ದೊರೆಯುತ್ತದೆ ಎಂಬುದಾಗಿದೆ.

ವಿಶ್ವದ ಮಟ್ಟದಲ್ಲಿ ಮಹಿಳಾ ಚಳುವಳಿಗೆ ಆರಂಭದಲ್ಲಿ ಪ್ರೇರಣೆಯಾಗಿದ್ದ ಸಂಗತಿಯೆಂದರೆ ಮಹಿಳಾ ಶಿಕ್ಷಣವಾಗಿದೆ. ಮಹಿಳಾ ಚಳುವಳಿಯ ಎರಡನೆಯ ಹಂತದಲ್ಲಿ ಮಹಿಳೆಯರ ಶಿಕ್ಷಣದಿಂದ ಚಳುವಳಿಗಾರರ ಗಮನವು ಮಹಿಳಾ ಅಧ್ಯಯನದ ಕಡೆಗೆ ತಿರುಗಿತು. ಕಳೆದ ಶತಮಾನದ ೬೦-೭೦ರ ದಶಕದಲ್ಲಿ ಮಹಿಳೆಯರ ಸ್ಥಿತಿಗತಿ ಮತ್ತು ಸ್ಥಾನಮಾನಗಳನ್ನು ಹಾಗೂ ಅವರು ಎದುರಿಸುತ್ತಿರುವ ತಾರತಮ್ಯ, ಶೋಷಣೆ,

ಅಸಮಾನತೆ ಮುಂತಾದವುಗಳನ್ನು ಅರ್ಥ ಮಾಡಿಕೊಳ್ಳಲು ಆ ಮೂಲಕ ಅದನ್ನು ನಿವಾರಿಸಲು ಒಂದು ಪ್ರತ್ಯೇಕವಾದ ಜ್ಞಾನಶಿಸ್ತು ಬೇಕೆಂಬ ಒತ್ತಡ ಅಧಿಕವಾಯಿತು. ಇಂತಹ ಒತ್ತಡಕ್ಕೆ ಕಾರಣವಾಗಿದ್ದ ಸಂಗತಿಯೆಂದರೆ ೨೦ನೆಯ ಶತಮಾನದ ಆದಿ ಭಾಗದಲ್ಲಿ ಮಹಿಳೆಯರಿಗೆ ದೊರಕಿದ ಶಿಕ್ಷಣವೇ ಆಗಿದೆ. ಹೀಗೆ ಮಹಿಳಾ ಶಿಕ್ಷಣದ ನೆಲೆಯಿಂದ ಆರಂಭಗೊಂಡ ಪ್ರಕ್ರಿಯೆಯು ಇಂದು ಮಹಿಳಾ ಅಧ್ಯಯನವೆಂಬ ಅಧ್ಯಯನ ಶಿಸ್ತು ರೂಪುಗೊಳ್ಳುವಲ್ಲಿಗೆ ಬಂದು ನಿಂತಿದೆ.

### ಮಹಿಳಾ ಶಿಕ್ಷಣದ ಉದ್ದೇಶ

ಸ್ವಾತಂತ್ರ್ಯಪೂರ್ವದಿಂದಲೂ ಮತ್ತು ಸ್ವಲ್ಪಮಟ್ಟಿಗೆ ಈಗಲೂ ಮಹಿಳೆಗೆ ಶಿಕ್ಷಣ ಕೊಡಿಸುವುದರ ಹಿಂದಿನ ಉದ್ದೇಶ ಅವಳನ್ನು ಕೇವಲ ಉತ್ತಮ ತಾಯಿಯನ್ನಾಗಿ ಉತ್ತಮ ಗೃಹಿಣಿಯನ್ನಾಗಿ ಮಾಡುವುದಾಗಿದೆಯೆ ವಿನಾ ಅವಳನ್ನು ವೃತ್ತಿಪರ ಮಹಿಳೆ ಯನ್ನಾಗಿ ಮಾಡುವುದಾಗಿಲ್ಲ. ಮಹಿಳೆಯರ ದೃಷ್ಟಿಯಿಂದ ಶಿಕ್ಷಣವು ಅವರನ್ನು ಪ್ರಾಥಮಿಕವಾಗಿ ಉತ್ತಮ ಗೃಹಿಣಿಯರನ್ನಾಗಿ ಮತ್ತು ಉತ್ತಮ ತಾಯಿಯಾಗಿ ಮಾಡುವುದಾಗಿದೆ. ಸಾಕ್ಷರತೆ ಯಾಕೆ ಬೇಕೆಂದರೆ ಅದರಿಂದ ಮತ್ತೊಂದನ್ನು ಸಾಧಿಸಿ ಕೊಳ್ಳಬಹುದಾಗಿದೆ. ಒಬ್ಬ ಮಹಿಳೆಗೆ ಸಾಕ್ಷರತೆ ತನ್ನಷ್ಟಕ್ಕೆ ಮಹತ್ವವಾದುದೆಂದು ಪರಿಭಾವಿಸಿ ಕೊಳ್ಳುವ ಕ್ರಮ ಎಲ್ಲಿಯೂ ಕಂಡುಬರುವುದಿಲ್ಲ. ಅಲ್ಲಿ ಅವಳನ್ನು ವೃತ್ತಿಪರಳನ್ನಾಗಿ ಮಾಡುವುದು ಆನುಷಂಗಿಕವಾಗಿತ್ತು. ಆದರೆ ಪುರುಷರ ದೃಷ್ಟಿಯಿಂದ ವೃತ್ತಿಪರತೆಯು ಪ್ರಾಥಮಿಕವಾಗಿತ್ತು ಮತ್ತು ಉತ್ತಮ ತಂದೆಯಾಗುವುದು ಹಾಗೂ ಉತ್ತಮ ಗೃಹಸ್ಥ ನಾಗುವುದು ಆನುಷಂಗಿಕವಾಗಿತ್ತು. ಸ್ವಾತಂತ್ರ್ಯಪೂರ್ವ ಕಾಲದಿಂದಲೂ ಸಾಮಾಜಿಕ ಸುಧಾರಕರು ಮತ್ತು ಶಿಕ್ಷಣ ತಜ್ಞರೆನಿಸಿಕೊಂಡವರು ಮಹಿಳೆಯರ ಶಿಕ್ಷಣಕ್ಕೆ ಸಂಬಂಧಿಸಿ ದಂತೆ ಕೌಟುಂಬಿಕ ಜವಾಬುದಾರಿಯನ್ನು ಮತ್ತು ಗೃಹವಿಜ್ಞಾನವನ್ನು ಮತ್ತೆ ಮತ್ತೆ ಒತ್ತಿ ಹೇಳುತ್ತಿದ್ದುದರ ಹಿಂದಿನ ಮರ್ಮವೇನು? ಒಂದು ಕಾಲಕ್ಕೆ ಶೈಕ್ಷಣಿಕ ಅವಕಾಶ ಗಳನ್ನು ಮಹಿಳೆಯರಿಗೆ ಮತ್ತು ಪುರುಷರಿಗೆ ಸಮಾನವಾಗಿ ನೀಡಬೇಕು ಎಂಬಲ್ಲಿಗೆ ಅಭಿವೃದ್ಧಿನೀತಿ ನಿಂತು ಬಿಡುತ್ತದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಹಿಳೆಯರಿಗೆ ಹೆಚ್ಚು ಹೆಚ್ಚು ಅವಕಾಶಗಳನ್ನು ನೀಡಬೇಕು ಎಂಬುದೇ ಅನೇಕ ಚಳುವಳಿಗಾರರ ಮತ್ತು ಮಹಿಳಾವಾದಿಗಳ ಪ್ರಧಾನ ಒತ್ತಾಯವಾಗಿತ್ತು. ಆದರೆ ಇಂದು ಮಹಿಳಾ ಶಿಕ್ಷಣವನ್ನು ಕುರಿತ ಚರ್ಚೆಯ ನೆಲೆ ಬದಲಾಗಿದೆ. ಮಹಿಳಾ ಸಮಾನತೆಗಾಗಿ ಮತ್ತು ಮಹಿಳೆಯರ ಸಶಕ್ತೀಕರಣಕ್ಕಾಗಿ ಶಿಕ್ಷಣವೆಂಬ ನೆಲೆಗೆ ಚರ್ಚೆ ಬಂದು ನಿಂತಿದೆ. ಅಂದರೆ ಮಹಿಳೆಯರ ಸಾಕ್ಷರತೆ ಮತ್ತು ಶಿಕ್ಷಣವೆಂಬುದು ಕೇವಲ 'ಔದಾರ್ಯ'ದ ಪ್ರಶ್ನೆಯಲ್ಲ. ಅದು ಹಕ್ಕಿನ ಸ್ವರೂಪವನ್ನು ತಳೆದಿದೆ. ಮಹಿಳೆಯರ ಶಿಕ್ಷಣದ ಹಿಂದಿನ ಮತ್ತೊಂದು ಉದ್ದೇಶ ವೇನಿತ್ತೆಂದರೆ ಅದು ಯಾವ ಕಾರಣಕ್ಕೂ ಮಹಿಳೆಯರು ಅಸ್ತಿತ್ವದಲ್ಲಿರುವ ಸಾಮಾಜಿಕ

ವ್ಯವಸ್ಥೆಯ ಬದಲಾವಣೆಯನ್ನು ಒತ್ತಾಯಿಸುವಂತಹ ಪ್ರೇರಣೆಯನ್ನು ನೀಡುವಂತಿರಬಾರದೆಂಬುದಾಗಿತ್ತು. ಯಾವುದೆ ಕಾರಣಕ್ಕೂ ಮಹಿಳೆಯರು ತಮ್ಮ ಕೌಟುಂಬಿಕ ಜವಾಬುದಾರಿಯನ್ನು ಶಿಕ್ಷಣದ ಕಾರಣಕ್ಕೆ ಬಿಟ್ಟು ಬಿಡುವಂತಹದ್ದಾಗ ಬಾರದು. ಸಾಕ್ಷರತೆ ಮತ್ತು ಶಿಕ್ಷಣವು ಸಾಂಪ್ರದಾಯಕವಾಗಿ ಕಟ್ಟಿಕೊಂಡು ಬಂದಿರುವ ಲಿಂಗಸಂಬಂಧಗಳನ್ನು ಹಾಗೂ ಕುಟುಂಬ ವ್ಯವಸ್ಥೆಯನ್ನು ಊರ್ಜಿತಗೊಳಿಸುವಂತೆ ಇರಬೇಕು. ಈ ಸಂಗತಿಯು ನಮ್ಮ ಸಮಾಜದಲ್ಲಿ ಇನ್ನೂ ಗಟ್ಟಿಯಾಗಿ ನೆಲೆಯೂರಿದೆ.

ಈ ಬಗೆಯ ಹಿನ್ನೆಲೆಯಿಂದಾಗಿ ಇಂದಿಗೂ ಮಹಿಳೆಯರ ಸಾಕ್ಷರತೆ ಹಾಗೂ ಅವರ ಶಿಕ್ಷಣವು ತೀವ್ರ ಹಿಂದುಳಿದ ಸ್ಥಿತಿಯಲ್ಲಿದೆ. ರೂಢಿಗತ ಸಾಮಾಜಿಕ ನಂಬಿಕೆಗಳನ್ನು ಮೀರಿ ಮಹಿಳೆಯರ ಶಿಕ್ಷಣವನ್ನು ನಮಗೆ ಇಂದಿಗೂ ಪರಿಭಾವಿಸಿಕೊಳ್ಳುವುದು ಸಾಧ್ಯವಾಗಿಲ್ಲ. ಇಂದು ಕಂಡು ಬರುತ್ತಿರುವ ಲಿಂಗಸಂಬಂಧಿ ಸಾಕ್ಷರತಾ ಅಂತರವನ್ನು ಚಾರಿತ್ರಿಕ ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಲಿಂಗ ಅಸಮಾನತೆಯೆಂಬುದು ಅನೂಚಾನವಾಗಿ ಹರಿದುಕೊಂಡು ಬರುತ್ತಿರುವ ಒಂದು ಸಂಗತಿಯಾಗಿದೆ.

**ಅಕ್ಷರಸ್ಥರಾಗುವುವೆಂದರೆ?**

ಸಾಕ್ಷರತೆ ಬಗ್ಗೆ ಬಹು ಮುಖ್ಯವಾದ ಟೀಕೆಯೊಂದಿದೆ. ಅದೇನೆಂದರೆ ಅಕ್ಷರಸ್ಥರಾದವರೆಲ್ಲ ವಿವೇಕಿಗಳಾಗುವುದಿಲ್ಲ. ಅಕ್ಷರ ಜ್ಞಾನ ಬೇರೆ ಮತ್ತು ವಿವೇಕ ಬೇರೆ. ಅಕ್ಷರಸ್ಥರಾದ ಮಾತ್ರಕ್ಕೆ ಜನರು ಒಳ್ಳೆಯರಾಗುವುದಿಲ್ಲ. ಅಕ್ಷರ ಜ್ಞಾನವಿಲ್ಲದವರೆಲ್ಲ ಅವಿವೇಕಿಗಳಲ್ಲ ಅಥವಾ ಕೆಡುಕರಲ್ಲ. ಅಕ್ಷರ ಜ್ಞಾನವನ್ನು ಪಾಶ್ಚಿಮಾತ್ಯ ಮೌಲ್ಯವೆನ್ನುವವರು ಇದ್ದಾರೆ. ಆದರೆ ಅಮರ್ತ್ಯಸೇನ್‌ರ ಬರಹಗಳು ಮತ್ತು ಯುಎನ್‌ಡಿಪಿಯ ವರದಿಗಳು ಸಾಕ್ಷರತೆ ಮತ್ತು ಮಹಿಳೆಯರ ಅಭಿವೃದ್ಧಿಗಳ ನಡುವಿನ ಸಂಬಂಧವನ್ನು ಅನೇಕ ನಿದರ್ಶನಗಳ ಮೂಲಕ ತೋರಿಸಿಕೊಟ್ಟಿದ್ದಾರೆ (ವಿವರಗಳಿಗೆ ನೋಡಿ: ಜೀನ್ ಡ್ರೀಜ್ ಮತ್ತು ಅಮರ್ತ್ಯಸೇನ್: ೨೦೦೨, ಮಾರ್ತನುಸ್‌ಬಾಮ್ ೨೦೦೦). ಮಹಿಳೆಯರ ಸಾಕ್ಷರತೆಯನ್ನು ಉತ್ತಮ ಪಡಿಸುವುದರ ಮೂಲಕ ಜನಸಂಖ್ಯೆಯ ತೀವ್ರ ಬೆಳವಣಿಗೆಯನ್ನು ತಡೆಗಟ್ಟಬಹುದೆಂಬುದನ್ನು ಅನುಭವವಾದಿ ಅಧ್ಯಯನಗಳ ಮೂಲಕ ಅಮರ್ತ್ಯಸೇನ್ ತೋರಿಸಿಕೊಟ್ಟಿದ್ದಾರೆ. ಮಮತಾ ಮೂರ್ತಿ ಮತ್ತು ಇತರರು (೧೯೯೫) ನಡೆಸಿದ ಒಂದು ಅಧ್ಯಯನದಲ್ಲಿ ಪುರುಷರ ಸಾಕ್ಷರತೆಗಿಂತ ಮಹಿಳೆಯರ ಸಾಕ್ಷರತೆಯು ಶಿಶು ಮರಣ ಪ್ರಮಾಣವನ್ನು ತಗ್ಗಿಸುವುದರಲ್ಲಿ ಹೆಚ್ಚು ಪರಿಣಾಮಕಾರಿಯೆಂಬುದನ್ನು ದೃಢಪಡಿಸಿದ್ದಾರೆ.

## ಭಾಗ-೨

## ಕರ್ನಾಟಕದಲ್ಲಿ ಮಹಿಳೆಯರ ಸಾಕ್ಷರತೆ ೧೯೯೧ ಮತ್ತು ೨೦೦೧

ಕೆಳಗಿನ ಕೋಷ್ಟಕದಲ್ಲಿ ೧೯೯೧ ಮತ್ತು ೨೦೦೧ರಲ್ಲಿ ಮಹಿಳೆಯರ ಸಾಕ್ಷರತೆ ಕರ್ನಾಟಕದಲ್ಲಿ ಹೇಗೆ ಏರಿಕೆಯಾಗಿದೆಯೆಂಬುದನ್ನು ತೋರಿಸಲಾಗಿದೆ.

**ಕರ್ನಾಟಕದಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣ: ೧೯೯೧ ಮತ್ತು ೨೦೦೧**

**ಕೋಷ್ಟಕ-೧**

| ಕ್ರಸಂ. | ವಿವರಗಳು | ಘಟಕ | ೧೯೯೧ | ೨೦೦೧ | ದಶಕವಾರು ಏರಿಕೆ ಪ್ರಮಾಣ |
|---|---|---|---|---|---|
| ೧. | ಮಹಿಳೆಯರು | ಶೇ. | ೪೪.೩೪ | ೫೬.೯ | ೧೮.೮೪ |
| ೨. | ಪುರುಷರು | ಶೇ. | ೬೭.೨೬ | ೭೬.೧ | ೧೩.೧೪ |
| ೩. | ಒಟ್ಟು | ಶೇ. | ೫೬.೦೪ | ೬೬.೬೪ | ೨೮.೩೩ |
| ೪. | ಲಿಂಗ ಸಮಾನತಾ ಸೂಚಿ | | ೬೫.೦೪ | ೭೪.೭೭ | ೧೩.೪೨ |

ಮೂಲ : ೧. ಸೆನ್ಸ್ ಆಫ್ ಇಂಡಿಯಾ : ೧೯೯೧, ಸಿರೀಸ್-೧೧ ಕರ್ನಾಟಕ, ಪಾರ್ಟ್-ಬಿ. ಪ್ರೈಮರಿ ಸೆನ್ಸ್ಸ್ ಅಬ್‌ಸ್ಟ್ರಾಕ್ಟ್ ಜನರಲ್ ಪಾಪುಲೇಶನ್, ಡೈರೆಕ್ಟರೇಟ್ ಆಫ್ ಸೆನ್ಸ್ಸ್ ಆಪರೇಶನ್ಸ್, ಕರ್ನಾಟಕ.

೨.ಸೆನ್ಸ್ಸ್ ಆಫ್ ಇಂಡಿಯಾ : ೨೦೦೧ ಸಿರೀಸ್-೩೦ ಕರ್ನಾಟಕ ಪೇಪರ್- ಆಫ್ ೨೦೦೧. ಪ್ರಾವಿಶನಲ್ ಪಾಪುಲೇಶನ್ ಟೋಟಲ್ಸ್: ರೂರಲ್-ಅರ್ಬನ್ ಪಾಪುಲೇಶನ್, ಡೈರೆಕ್ಟರೇಟ್ ಆಫ್ ಸೆನ್ಸ್ಸ್ ಆಪರೇಶನ್ಸ್, ಕರ್ನಾಟಕ.

ಮೇಲಿನ ಕೋಷ್ಟಕದಲ್ಲಿ(೧) ಕರ್ನಾಟಕವು ೧೯೯೧ ಮತ್ತು ೨೦೦೧ರಲ್ಲಿ ಸಾಧಿಸಿ ಕೊಂಡಿರುವ ಸಾಕ್ಷರತಾ ಸಂಬಂಧಿ ಸಾಧನೆಯನ್ನು ತೋರಿಸಲಾಗಿದೆ. ಕಳೆದ ಒಂದು ದಶಕದಲ್ಲಿ ಮಹಿಳೆಯರ ಸಾಕ್ಷರತೆಯು ಶೇ. ೧೮.೮೪ರಷ್ಟು ಏರಿಕೆಯಾಗಿದೆ. ಇದು ಪುರುಷರ ಸಾಕ್ಷರತೆಯಲ್ಲಿನ ಏರಿಕೆಗಿಂತ ಅಧಿಕವಾಗಿದೆ. ಇಷ್ಟಾದರೂ ಲಿಂಗಸಂಬಂಧಿ ಅಸಮಾನತೆಯ ಅಂತರವು ೧೯೯೧ರಲ್ಲಿ ಶೇ. ೨೨.೯೨ ಅಂಶಗಳಷ್ಟಿದ್ದುದು ೨೦೦೧ರಲ್ಲಿ ಅದು ಶೇ. ೧೯.೨೦ ಅಂಶಗಳಿಗೆ ಕಡಿಮೆಯಾಗಿದೆ. ಇನ್ನೊಂದು ರೀತಿ ಹೇಳಬೇಕೆಂದರೆ ೧೯೯೧ರಲ್ಲಿ ಮಹಿಳೆಯರ ಸಾಕ್ಷರತೆಯು ಪುರುಷರ ಸಾಕ್ಷರತೆಯ ೨/೩ರಷ್ಟಿದ್ದುದು ೨೦೦೧ರಲ್ಲಿ ಅದು ಪುರುಷರ ಸಾಕ್ಷರತೆಯ ೩/೪ರಷ್ಟಾಗಿದೆ. ಇಷ್ಟಾದರೂ ಮಹಿಳೆಯರ ಸಾಕ್ಷರತೆಯು ಪುರುಷರ ಸಾಕ್ಷರತೆಗಿಂತ ಬಹಳ ಕಡಿಮೆಯಿದೆ.

## ಕೋಷ್ಟಕ-೨

### ಕರ್ನಾಟಕದಲ್ಲಿ ಅಕ್ಷರಸ್ಥರು ಮತ್ತು ಅನಕ್ಷರಸ್ಥರು-೧೯೯೧

| ಕ್ರಸಂ. | ವಿವರಗಳು | ಅಕ್ಷರಸ್ಥರು | ಅನಕ್ಷರಸ್ಥರು |
|---|---|---|---|
| ೧. | ಒಟ್ಟು ಜನಸಂಖ್ಯೆ | ೨೧೦.೧೩ ಲಕ್ಷ | ೧೬೪.೮೭ ಲಕ್ಷ |
| ೨. | ಮಹಿಳೆಯರು | ೮೧.೪೨ ಲಕ್ಷ | ೧೦೨.೨೨ ಲಕ್ಷ |
| ೩. | ಪುರುಷರು | ೧೨೮.೭೨ ಲಕ್ಷ | ೬೨.೬೪ ಲಕ್ಷ |

ಮೂಲ : ೧. ಸೆನ್ಸಸ್ ಆಫ್ ಇಂಡಿಯಾ : ೧೯೯೧. ಸಿರೀಸ್-೧೧ ಕರ್ನಾಟಕ, ಪಾರ್ಟ್-ಬಿ. ಪ್ರೈಮರಿ ಸೆನ್ಸಸ್ ಆಬ್‌ಸ್ಟ್ರಾಕ್ಟ್ : ಜನರಲ್ ಪಾಪುಲೇಶನ್, ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್ಸ್, ಕರ್ನಾಟಕ.

ಈ ಕೋಷ್ಟಕದಿಂದ (೨) ತಿಳಿದು ಬರುವ ಸಂಗತಿಯೆಂದರೆ ೧೯೯೧ರಲ್ಲಿ ಅಕ್ಷರಸ್ಥ ಮಹಿಳೆಯರಿಗಿಂತ ಅನಕ್ಷರಸ್ಥ ಮಹಿಳೆಯರ ಸಂಖ್ಯೆಯು ಅಧಿಕವಾಗಿತ್ತು. ರಾಜ್ಯದ ಒಟ್ಟು ಅಕ್ಷರಸ್ಥರಲ್ಲಿ ಪುರುಷರ ಪ್ರಮಾಣ ಶೇ. ೬೧.೨೫ರಷ್ಟಿದ್ದರೆ ಮಹಿಳೆಯರ ಪ್ರಮಾಣವು ಶೇ. ೩೮.೭೫ರಷ್ಟಿತ್ತು. ಆದರೆ ಅನಕ್ಷರಸ್ಥರಲ್ಲಿ ಪುರುಷರ ಪ್ರಮಾಣವು ಶೇ. ೩೮ರಷ್ಟಿದ್ದರೆ ಮಹಿಳೆಯರ ಪ್ರಮಾಣವು ಶೇ. ೬೨ರಷ್ಟಿತ್ತು.

ಈ ಚಿತ್ರವು ೨೦೦೧ರಲ್ಲಿ ಸ್ವಲ್ಪ ಬದಲಾಗಿದೆ. ಇದನ್ನು ಕೋಷ್ಟಕ-೩ರಲ್ಲಿ ತೋರಿಸಲಾಗಿದೆ.

## ಕೋಷ್ಟಕ-೩

### ಕರ್ನಾಟಕದಲ್ಲಿ ಅಕ್ಷರಸ್ಥರು ಮತ್ತು ಅನಕ್ಷರಸ್ಥರು-೨೦೦೧

| ಕ್ರಸಂ. | ವಿವರಗಳು | ಅಕ್ಷರಸ್ಥರು | ಅನಕ್ಷರಸ್ಥರು |
|---|---|---|---|
| ೧. | ಒಟ್ಟು ಜನಸಂಖ್ಯೆ | ೩೦೪.೩೫ ಲಕ್ಷ | ೧೫೨.೩೬ ಲಕ್ಷ |
| ೨. | ಮಹಿಳೆಯರು | ೧೨೭೭೪ ಲಕ್ಷ | ೯೬.೮೭ ಲಕ್ಷ |
| ೩. | ಪುರುಷರು | ೧೭೬೬೧ ಲಕ್ಷ | ೫೫.೪೯ ಲಕ್ಷ |

ಮೂಲ : ೧. ಸೆನ್ಸಸ್ ಆಫ್ ಇಂಡಿಯಾ : ೨೦೦೧ ಸಿರೀಸ್-೩೦ ಕರ್ನಾಟಕ ಪೇಪರ್-೨ ಆಫ್ ೨೦೦೧. ಪ್ರಾವಿಶನಲ್ ಪಾಪುಲೇಶನ್ ಟೋಟಲ್ಸ್: ರೂರಲ್-ಅರ್ಬನ್ ಪಾಪುಲೇಶನ್, ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್ಸ್, ಕರ್ನಾಟಕ.

ಈ ಕೋಷ್ಟಕದಿಂದ ೨೦೦೧ರಲ್ಲಿ ರಾಜ್ಯದ ಒಟ್ಟು ಅಕ್ಷರಸ್ಥರಲ್ಲಿ ಮಹಿಳೆಯರ ಪ್ರಮಾಣ ಶೇ. ೪೧.೯೭ರಷ್ಟಿತ್ತು ಮತ್ತು ಪುರುಷರ ಪ್ರಮಾಣವು ಶೇ. ೫೮.೦೩ರಷ್ಟಿತ್ತು ಎಂಬುದು ತಿಳಿಯುತ್ತದೆ. ಆದರೆ ಅನಕ್ಷರಸ್ಥರಲ್ಲಿ ಪುರುಷರ ಪ್ರಮಾಣವು ಶೇ.

೩೬.೪೧ರಷ್ಟಿದ್ದರೆ ಮಹಿಳೆಯರ ಪ್ರಮಾಣವು ಶೇ. ೬೩.೫೯ರಷ್ಟಿತ್ತು. ಅಂದರೆ ೧೯೯೧ರಲ್ಲಿ ಅಕ್ಷರಸ್ಥ ಮಹಿಳೆಯರಿಗಿಂತ ಅನಕ್ಷರಸ್ಥ ಮಹಿಳೆಯರು ಅಧಿಕವಾಗಿದ್ದರೆ ೨೦೦೧ರಲ್ಲಿ ಚಿತ್ರ ಬದಲಾಗಿದೆ. ಅಲ್ಲಿ ಅಕ್ಷರಸ್ಥ ಮಹಿಳೆಯರ ಸಂಖ್ಯೆಯು ಅನಕ್ಷರಸ್ಥ ಮಹಿಳೆಯರ ಸಂಖ್ಯೆಗಿಂತ ಅಧಿಕವಾಗಿದೆ.

ಮೇಲಿನ ವಿಶ್ಲೇಷಣೆಯು ಮಹಿಳೆಯರ ಸಾಕ್ಷರತೆಯು ಸಾಗಬೇಕಾಗಿರುವ ದಾರಿ ಬಹು ದೂರವಿದೆಯೆಂಬುದನ್ನು ತೋರಿಸುತ್ತದೆ.

## ಭಾಗ–೩

## ಮಹಿಳೆಯರ ಸಾಕ್ಷರತೆ : ಶಿಷ್ಟ ಮತ್ತು ಪರಿಶಿಷ್ಟ ನೆಲೆಗಳು

ಈ ಕೆಳಗಿನ ಕೋಷ್ಟಕ–೪ರಲ್ಲಿ ಮಹಿಳಾ ಸಾಕ್ಷರತೆಯ ಶಿಷ್ಟ (ದಲಿತೇತರರು) ಮತ್ತು ಪರಿಶಿಷ್ಟ (ಪ.ಜಾ ಮತ್ತು ಪ.ಪಂ) ನೆಲೆಗಳನ್ನು ತೋರಿಸಲು ಪ್ರಯತ್ನಿಸಲಾಗಿದೆ. ಈ ಕೋಷ್ಟಕದಿಂದ ಸ್ಪಷ್ಟವಾಗುವ ಸಂಗತಿಯೆಂದರೆ 'ಮಹಿಳೆಯರು' ಎಂಬುದು ಒಂದು ಅಖಂಡವಾದ ಮತ್ತು ಅಭಿನ್ನವಾದ ಗುಂಪಲ್ಲ. ಅದನ್ನು ಅಭಿನ್ನವಾಗಿ ಪರಿಗಣಿಸಲು ಬರುವುದಿಲ್ಲ. ಒಂದು ವೇಳೆ ಅವರು ಒಂದು ವರ್ಗವಾಗಿದ್ದಿದ್ದರೆ ದಲಿತ ಮತ್ತು ದಲಿತೇತರ ಮಹಿಳೆಯರ ಸಾಕ್ಷರತಾ ಪ್ರಮಾಣದಲ್ಲಿ ವ್ಯತ್ಯಾಸವಿರಲು ಯಾವುದೇ ಕಾರಣಗಳಿಲ್ಲ. ಈ ಕಾರಣಕ್ಕೆ ಗೋಪಾಲ ಗುರು ದಲಿತ ಮಹಿಳೆಯರ ಸಾಮಾಜಿಕ ಸ್ಥಿತಿಯನ್ನು ದಲಿತೇತರ ಮಹಿಳೆಯರ ಸ್ಥಿತಿಗತಿಗಿಂತ ಭಿನ್ನವಾಗಿ ನೋಡ ಬೇಕೆಂದು ವಾದಿಸುತ್ತಿದ್ದಾರೆ (೧೯೯೫). ಸಾಮಾನ್ಯವಾಗಿ ಲಿಂಗ ಸಂಬಂಧಿ ಅಸಮಾನತೆ ಯನ್ನು ಕುರಿತಂತೆ ಚರ್ಚೆ ಮಾಡುವಾಗ ಮಹಿಳೆಯರು ಮತ್ತು ಪುರುಷರ ನಡುವಿನ ಅಂತರವನ್ನು ಮಾತ್ರ ಪರಿಗಣಿಸಲಾಗುತ್ತದೆ. ಈ ಬಗೆಯ ಅಂತರವನ್ನು ಕುರಿತಂತೆ ಚರ್ಚೆ ಮಾಡುವ ಅಗತ್ಯವನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಮಹಿಳೆಯರ ಸಾಕ್ಷರತೆ ಕುರಿತ ಚರ್ಚೆಯನ್ನು ನಾವು ಲಿಂಗಸಂಬಂಧಿ ನೆಲೆ, ವರ್ಗ ಸಂಬಂಧಿ ನೆಲೆ ಹಾಗೂ ಜಾತಿ ಸಂಬಂಧಿ ನೆಲೆಗಳಿಂದ ಪರಿಭಾವಿಸಿಕೊಳ್ಳಬೇಕಾಗುತ್ತದೆ.

ಒಟ್ಟು ಜನಸಂಖ್ಯೆಯನ್ನು ತೆಗೆದುಕೊಂಡರೆ ಲಿಂಗಸಂಬಂಧಿ ಸಾಕ್ಷರತಾ ಅಂತರ ಶೇ. ೧೯.೨ ಅಂಶಗಳಷ್ಟಾಗುತ್ತದೆ. ಆದರೆ ಅದು ದಲಿತರಿಗೆ ಸಂಬಂಧಿಸಿದಂತೆ ಶೇ. ೨೨.೩೫ ಅಂಶಗಳಷ್ಟಿದ್ದರೆ ದಲಿತೇತರರಿಗೆ ಸಂಬಂಧಿಸಿದಂತೆ ಅದು ಶೇ. ೧೬.೭೯ ಅಂಶಗಳಷ್ಟಿದೆ. ಅಂದರೆ ಸಾಕ್ಷರತೆಗೆ ಸಂಬಂಧಿಸಿದಂತೆ ಲಿಂಗಸಂಬಂಧಿ ಅಂತರ ದಲಿತರಲ್ಲಿ ದಲಿತೇತರರಲ್ಲಿರುವುದಕ್ಕಿಂತ ಅಧಿಕವಾಗಿದೆ. ಇದರ ಇನ್ನೊಂದು ಆಯಾಮವೆಂದರೆ ದಲಿತ ಮಹಿಳೆಯರು ಮತ್ತು ದಲಿತೇತರ ಮಹಿಳೆಯರ ನಡುವಿನ ಸಾಕ್ಷರತಾ ಅಂತರವಾಗಿದೆ.

## ಕೋಷ್ಟಕ-೪
### ಸಾಕ್ಷರತೆಯ ಸಾಮಾಜಿಕ ಮತ್ತು ಲಿಂಗ ಸಂಬಂಧಿ ನೆಲೆಗಳು-೧೯೯೧

| ಕ್ರಸಂ. | ವಿವರಗಳು | ಅಕ್ಷರಸ್ಥರು (ಲಕ್ಷಗಳಲ್ಲಿ) | ಅನಕ್ಷರಸ್ಥರು (ಲಕ್ಷಗಳಲ್ಲಿ) | ಸಾಕ್ಷರತಾ ಪ್ರಮಾಣ(ಶೇ) |
|---|---|---|---|---|
| ೧. | ಒಟ್ಟು ಜನಸಂಖ್ಯೆ | ೧೨೦.೧೩ | ೧೬೪.೮೭ | ೫೬.೦೩ |
| ೨. | ಮಹಿಳೆಯರು | ೮೧.೪೨ | ೧೦೨.೨೨ | ೪೪.೩೪ |
| ೩. | ಪುರುಷರು | ೧೨೫.೭೨ | ೬೨.೬೪ | ೬೭.೨೭ |
| ೪. | ಒಟ್ಟು ದಲಿತ ಜನಸಂಖ್ಯೆ | ೨೮.೨೩ | ೪೬.೭೭ | ೩೭.೬೪ |
| ೫. | ದಲಿತ ಮಹಿಳೆಯರು | ೯.೩೫ | ೨೭.೪೦ | ೨೫.೪೪ |
| ೬. | ದಲಿತ ಪುರುಷರು | ೧೮.೮೭ | ೧೯.೩೮ | ೪೯.೩೩ |
| ೭. | ಒಟ್ಟು ದಲಿತೇತರ ಜನಸಂಖ್ಯೆ | ೧೮೧.೯ | ೧೧೮.೧೦ | ೬೦.೬೩ |
| ೮. | ದಲಿತೇತರ ಮಹಿಳೆಯರು | ೭೨.೦೭ | ೭೪.೮೨ | ೪೯.೦೬ |
| ೯. | ದಲಿತೇತರ ಪುರುಷರು | ೧೦೯.೮೫ | ೪೩.೨೬ | ೭೧.೭೫ |

ಮೂಲ : ಸೆನ್ಸಸ್ ಆಫ್ ಇಂಡಿಯಾ : ೧೯೯೧. ಕರ್ನಾಟಕ ಸಿರೀಸ್-೧೧. ಕರ್ನಾಟಕ ಪಾರ್ಟ್-ಬಿ. ಪ್ರೈಮರಿ ಸೆನ್ಸಸ್ ಅಬ್‌ಸ್ಟ್ರಾಕ್ಟ್ : ಶೆಡೂಲ್ಡ್ ಕಾಸ್ಟ್ ಆಂಡ್ ಶೆಡೂಲ್ಡ್ ಟ್ರೈಬ್, ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್ಸ್, ಕರ್ನಾಟಕ.

ಇದು ೨೦೦೧ರಲ್ಲಿ ಶೇ. ೨೩.೧೬ ಅಂಶಗಳಷ್ಟಿದೆ. ಆದರೆ ದಲಿತ ಪುರುಷರು ಮತ್ತು ದಲಿತೇತರ ಪುರುಷರನ್ನು ತೆಗೆದುಕೊಂಡರೆ ಅಲ್ಲಿ ಸಾಕ್ಷರತಾ ಅಂತರ ಶೇ. ೧೭.೬೦ ಅಂಶಗಳಷ್ಟಿದೆ.

ಸಾಕ್ಷರತೆಗೆ ಸಂಬಂಧಿಸಿದಂತೆ ನಾವು ಕಾರ್ಯಕ್ರಮವನ್ನು ರೂಪಿಸುವಾಗ ಸಾಕ್ಷರತೆಗೆ ಸಂಬಂಧಿಸಿದ ಲಿಂಗಸಂಬಂಧಿ ಅಂತರದ ಜೊತೆಗೆ ದಲಿತ ಮಹಿಳೆಯರು ಮತ್ತು ದಲಿತೇತರ ಮಹಿಳೆಯರ ನಡುವಿನ ಸಾಕ್ಷರತಾ ಅಂತರದ ಬಗ್ಗೆಯೂ ಗಮನ ನೀಡಬೇಕಾಗುತ್ತದೆ. ದಲಿತರಿಗೆ ಸಂಬಂಧಿಸಿದಂತೆ ಸಾಕ್ಷರತೆಯ ಲಿಂಗ ಸಮಾನತಾ ಸೂಚ್ಯಂಕವು ೨೦೦೧ರಲ್ಲಿ ೦.೭೨೪ರಷ್ಟಿದ್ದರೆ ದಲಿತೇತರರಲ್ಲಿ ಅದು ೦.೮೮೭ರಷ್ಟಿದೆ. ದಲಿತರು ಮತ್ತು ದಲಿತೇತರರನ್ನು ಕೂಡಿಸಿ ನೋಡಿದಾಗ, ಅಂದರೆ ಒಟ್ಟು ಜನಸಂಖ್ಯೆಗೆ ಸಂಬಂಧಿಸಿದಂತೆ ಅದು ೦.೮೫೪ರಷ್ಟಿದೆ. ದಲಿತ ಮಹಿಳೆಯರ ಸಾಕ್ಷರತೆಗೆ ಸಂಬಂಧಿಸಿದ ಸಾಮಾಜಿಕ ಸಮಾನತಾ ಸೂಚ್ಯಂಕವು ೦.೭೦೭ರಷ್ಟಿದ್ದರೆ ದಲಿತೇತರ ಮಹಿಳೆಯರಲ್ಲಿ ಅದು ೧.೧೧೪ರಷ್ಟಿದೆ.

## ಕೋಷ್ಟಕ-೫

### ಸಾಕ್ಷರತೆಯ ಸಾಮಾಜಿಕ ಮತ್ತು ಲಿಂಗ ಸಂಬಂಧಿ ನೆಲೆಗಳು-೨೦೦೧

| ಕ್ರಸಂ. ವಿವರಗಳು | ಅಕ್ಷರಸ್ಥರು (ಲಕ್ಷಗಳಲ್ಲಿ) | ಅನಕ್ಷರಸ್ಥರು (ಲಕ್ಷಗಳಲ್ಲಿ) | ಸಾಕ್ಷರತಾ ಪ್ರಮಾಣ(ಶೇ) |
|---|---|---|---|
| ೧. ಒಟ್ಟು ಜನಸಂಖ್ಯೆ | ೩೦೪.೩೫ | ೧೫೨.೩೪ | ೬೬.೬೦ |
| ೨. ಒಟ್ಟು ಮಹಿಳೆಯರು | ೧೨೭.೭೪ | ೯೬.೮೭ | ೫೬.೯೦ |
| ೩. ಒಟ್ಟು ಪುರುಷರು | ೧೭೬.೬೧ | ೫೫.೪೭ | ೭೬.೧೦ |
| ೪. ಒಟ್ಟು ದಲಿತ ಜನಸಂಖ್ಯೆ | ೫೨.೪೯ | ೪೯.೩೩ | ೫೫.೫೫ |
| ೫. ದಲಿತ ಮಹಿಳೆಯರು | ೨೦.೨೩ | ೩೦.೦೫ | ೪೦.೨೩ |
| ೬ ದಲಿತ ಪುರುಷರು | ೩೨.೨೬ | ೧೯.೨೯ | ೬೨.೫೮ |
| ೭. ಒಟ್ಟು ದಲಿತೇತರ ಜನಸಂಖ್ಯೆ | ೨೫೧.೮೬ | ೧೦೭.೦೦ | ೭೧.೪೫ |
| ೮. ದಲಿತೇತರ ಮಹಿಳೆಯರು | ೧೦೭.೫೧ | ೬೫.೯೨ | ೬೩.೨೯ |
| ೯. ದಲಿತೇತಗ ಪುರುಷರು | ೧೪೪.೩೫ | ೩೬.೦೮ | ೮೦.೧೮ |

ಮೂಲ : ಸೆನ್ಸಸ್ ಆಫ್ ಇಂಡಿಯಾ : ೨೦೦೧. ಸಿರೀಸ್-೩೦, ಕರ್ನಾಟಕ ಪ್ರೈಮರಿ ಸೆನ್ಸಸ್ ಅಬ್‌ಸ್ಟ್ರಾಕ್ಟ್, ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್ಸ್, ಕರ್ನಾಟಕ.

ಇಲ್ಲಿ ಏನನ್ನು ಹೇಳಲು ಪ್ರಯತ್ನಿಸಲಾಗುತ್ತಿದೆಯೆಂದರೆ ಸಮಾಜದಲ್ಲಿ ಅತ್ಯಂತ ದುಸ್ಥಿತಿಗೆ ಒಳಗಾಗಿರುವ ವರ್ಗವೆಂದರೆ ದಲಿತ ಮಹಿಳೆಯರು ಎಂಬುದಾಗಿದೆ. ಈ ಅಧ್ಯಯನದಿಂದ ಕಂಡುಕೊಳ್ಳಲಾದ ಮತ್ತೊಂದು ತಥ್ಯವೆಂದರೆ ಸಾಕ್ಷರತೆಗೆ ಸಂಬಂಧಿಸಿದ ಅಂತರವನ್ನು ವಿಶ್ಲೇಷಿಸುವಾಗ ಒಟ್ಟು ಜನಸಂಖ್ಯೆ ಮತ್ತು ದಲಿತರ ನಡುವಿನ ಸಾಕ್ಷರತಾ ಅಂತರವನ್ನು ಗುರಿಯಾಗಿಟ್ಟುಕೊಳ್ಳುವುದಕ್ಕೆ ಪ್ರತಿಯಾಗಿ ದಲಿತರು ಮತ್ತು ದಲಿತೇತರರ ನಡುವಿನ ಸಾಕ್ಷರತಾ ಅಂತರವನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂಬುದಾಗಿದೆ. ಒಟ್ಟು ಜನಸಂಖ್ಯೆ ಮತ್ತು ದಲಿತರ ನಡುವಿನ ಸಾಕ್ಷರತಾ ಅಂತರವನ್ನು ಗಮನದಲ್ಲಿಟ್ಟುಕೊಂಡರೆ ನಮಗೆ ದೊರೆಯುವ ಸಾಕ್ಷರತಾ ಅಂತರ ಪುರುಷರಿಗೆ ಸಂಬಂಧಿಸಿದಂತೆ ಶೇ. ೧೩.೫೨ ಅಂಶಗಳು ಮತ್ತು ಮಹಿಳೆಯರಿಗೆ ಸಂಬಂಧಿಸಿದಂತೆ ಅದು ಶೇ. ೧೬.೬೭ ಅಂಶಗಳು. ಆದರೆ ನಾವು ಸಾಕ್ಷರತೆಗೆ ಸಂಬಂಧಿಸಿದ ಅಂತರವನ್ನು ದಲಿತರು ಮತ್ತು ದಲಿತೇತರರ ನಡುವಿನ ಅಂತರವನ್ನು ಗಮನದಲ್ಲಿಟ್ಟುಕೊಂಡು ವಿಶ್ಲೇಷಿಸಿದರೆ ಆಗ ಅಂತರ ಪುರುಷರಿಗೆ ಸಂಬಂಧಿಸಿದಂತೆ ಶೇ. ೧೭.೬ ಅಂಶಗಳಷ್ಟಾದರೆ ಮಹಿಳೆಯರಿಗೆ ಸಂಬಂಧಿಸಿದಂತೆ ಅದು ಶೇ. ೨೩.೧೬ರಷ್ಟಾಗಿರುವುದು ತಿಳಿಯುತ್ತದೆ. ಈ ದೃಷ್ಟಿಯಿಂದ

ಮಹಿಳೆಯರ ಸಾಕ್ಷರತೆಯನ್ನು ಪರಿಭಾವಿಸಿ ಕೊಂಡಾಗ ಗೋಪಾಲ ಗುರು (೧೯೯೫) ಅವರು ತಮ್ಮ ಪ್ರಸಿದ್ಧ ಲೇಖನ 'ದಲಿತ್ ವುಮೆನ್ ಟಾಕ್ ಡಿಫರೆಂಟ್ಲಿ'ಯಲ್ಲಿ ವಾದಿಸಿರುವ ಸಂಗತಿಯ ಮಹತ್ವ ಅರ್ಥವಾಗುತ್ತದೆ.

## ಭಾಗ-೪
## ಕರ್ನಾಟಕದಲ್ಲಿ ವಯಸ್ಕ ಮಹಿಳೆಯರ ಸಾಕ್ಷರತಾ ಪ್ರಮಾಣ

ಪ್ರಸ್ತುತ ಭಾಗದಲ್ಲಿ ವಯಸ್ಕ ಮಹಿಳೆಯರ ಸಾಕ್ಷರತೆಯನ್ನು ಕುರಿತಂತೆ ಚರ್ಚೆ ಮಾಡಲಾಗಿದೆ. ಕರ್ನಾಟಕದ ಎಲ್ಲ ೨೭ ಜಿಲ್ಲೆಗಳಿಗೂ ಸಂಬಂಧಿಸಿದಂತೆ ೨೦೦೧ರ ವಯಸ್ಕರ ಸಾಕ್ಷರತೆಯನ್ನು ನಾನು ಬೇರೊಂದು ಸಂದರ್ಭದಲ್ಲಿ ಲೆಕ್ಕ ಹಾಕಿದ್ದೇನೆ. ಅದನ್ನು ಇಲ್ಲಿ ಲಿಂಗಸಂಬಂಧಿ ವಿಶ್ಲೇಷಣೆಗಾಗಿ ಬಳಸಿಕೊಳ್ಳಬಹುದಾಗಿದೆ. ಅದನ್ನು ಕೋಷ್ಟಕ -೬ರಲ್ಲಿ ನೀಡಲಾಗಿದೆ.

ವಯಸ್ಕರ ಸಾಕ್ಷರತೆಯನ್ನು ಲೆಕ್ಕ ಹಾಕುವ ವಿಧಾನವನ್ನು ತಿಳಿದುಕೊಳ್ಳಲು ನನ್ನ ೨೦೧೧ರ ಅಧ್ಯಯನ ಪ್ರಬಂಧವನ್ನು ನೋಡಬಹುದು (ಚಂದ್ರಶೇಖರ.ಟಿ.ಆರ್. ೨೦೧೦). ಇಲ್ಲಿ ಕೇವಲ ವಯಸ್ಕರ ಸಾಕ್ಷರತೆಯಲ್ಲಿನ ಲಿಂಗಸಂಬಂಧಿ ಅಸಮಾನತೆಯ ಸ್ವರೂಪವನ್ನು ಚರ್ಚಿಸಲಾಗಿದೆ. ಹದಿನೈದು ವರ್ಷಕ್ಕಿಂತ ಮೇಲ್ಪಟ್ಟ ಜನರ ಅಕ್ಷರಜ್ಞಾನವನ್ನು ವಯಸ್ಕರ ಸಾಕ್ಷರತೆಯೆಂದು ಕರೆಯಲಾಗಿದೆ.

ಲಿಂಗ ಸಂಬಂಧದ ದೃಷ್ಟಿಯಿಂದ ನಾವು ಒಟ್ಟು ಸಾಕ್ಷರತೆ ಮತ್ತು ವಯಸ್ಕರ ಸಾಕ್ಷರತೆಗಳ ನಡುವಿನ ಭಿನ್ನತೆಯನ್ನು ಅವಶ್ಯ ಗಮನಿಸಬೇಕು. ಮಹಿಳೆಯರ ಒಟ್ಟು ಸಾಕ್ಷರತೆ ಮತ್ತು ಮಹಿಳಾ ವಯಸ್ಕರ ಸಾಕ್ಷರತಾ ಪ್ರಮಾಣಗಳ ನಡುವೆ ರಾಜ್ಯಮಟ್ಟದಲ್ಲಿ ಶೇ.೧೧.೫೨ಅಂಶಗಳಷ್ಟು ಅಂತರವಿದ್ದರೆ ಗುಲಬರ್ಗಾ ವಿಭಾಗದಲ್ಲಿ ಅದು ಶೇ.೨೦.೧೬ ಅಂಶಗಳಷ್ಟಿದೆ. ಆದರೆ ಮೈಸೂರು ವಿಭಾಗದಲ್ಲಿ ಅದು ಕೇವಲ ಶೇ.೮.೬೬ ಅಂಶಗಳಷ್ಟಿದೆ. ಇದು ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯ ಪ್ರಮಾಣವನ್ನು ಮತ್ತು ಲಿಂಗಸಂಬಂಧಿ ಅಸಮಾನತೆಯ ತೀವ್ರತೆಯನ್ನು ಏಕಕಾಲದಲ್ಲಿ ತೋರಿಸುತ್ತಿದೆ. ನೀತಿ-ನಿರೂಪಣೆಯಲ್ಲಿ ಇದು ತುಂಬಾ ಉಪಯುಕ್ತವಾದ ಸಂಗತಿಯಾಗಿದೆ. ಈ ಬಗೆಯ ವರ್ಗೀಕರಣದ ಮಹತ್ವವೆಲ್ಲಿದೆಯೆಂದರೆ ಸಾಕ್ಷರತೆಯ ಲಿಂಗಸಂಬಂಧಿ ಅಸಮಾನತೆಯ ವಿರಾಟ್‌ಸ್ವರೂಪದಲ್ಲಿದೆ. ಒಟ್ಟು ಸಾಕ್ಷರತೆಯಲ್ಲಿ ಲಿಂಗಸಂಬಂಧಿ ಅಸಮಾನತೆಯ ಪ್ರಮಾಣ ರಾಜ್ಯಮಟ್ಟದಲ್ಲಿ ಶೇ.೧೯.೨೩ ಅಂಶಗಳಷ್ಟಿದ್ದರೆ ವಯಸ್ಕರ ಸಾಕ್ಷರತೆಯಲ್ಲಿ ಅದು ಶೇ.೨೪.೬೦ ಅಂಶಗಳಷ್ಟಿದೆ.

## ಕರ್ನಾಟಕದಲ್ಲಿ ಜಿಲ್ಲಾವಾರು ಒಟ್ಟು ಮತ್ತು ವಯಸ್ಕರ ಸಾಕ್ಷರತಾ ಪ್ರಮಾಣ ೨೦೦೧
### ಕೋಷ್ಟಕ ೬

| ಜಿಲ್ಲೆಗಳು | ಒಟ್ಟು ಸಾಕ್ಷರತಾ ಪ್ರಮಾಣ(ಶೇ) | | | ವಯಸ್ಕರ ಸಾಕ್ಷರತಾ ಪ್ರಮಾಣ(ಶೇ) | | |
|---|---|---|---|---|---|---|
| | ಒಟ್ಟು | ಪುರುಷರು | ಮಹಿಳೆಯರು | ಒಟ್ಟು | ಪುರುಷರು | ಮಹಿಳೆಯರು |
| ಬೀದರ್ | ೬೦.೯೪ | ೭೨.೪೬ | ೪೮.೮೧ | ೪೬.೯೧ | ೬೨.೬೫ | ೩೦.೨೬ |
| ಬಳ್ಳಾರಿ | ೫೭.೪೦ | ೬೯.೨೦ | ೪೫.೨೮ | ೪೩.೦೭ | ೫೮.೭೦ | ೨೭.೦೧ |
| ಗುಲಬರ್ಗಾ | ೫೦.೦೧ | ೬೧.೭೭ | ೩೭.೯೦ | ೩೧.೩೮ | ೪೭.೩೦ | ೧೫.೧೩ |
| ರಾಯಚೂರು | ೪೮.೮೧ | ೬೧.೫೨ | ೩೫.೯೩ | ೨೯.೮೩ | ೪೬.೯೩ | ೧೨.೭೫ |
| ಕೊಪ್ಪಳ | ೫೪.೧೦ | ೬೮.೪೩ | ೩೯.೬೧ | ೩೭.೩೪ | ೫೬.೬೪ | ೧೮.೦೬ |
| ಬೆಳಗಾಂ | ೬೪.೨೧ | ೭೫.೭೦ | ೫೨.೩೨ | ೬೧.೧೮ | ೬೮.೬೫ | ೫೩.೫೧ |
| ಬಾಗಲಕೋಟ | ೫೭.೩೦ | ೭೦.೮೮ | ೪೩.೫೬ | ೪೩.೯೯ | ೬೧.೨೯ | ೨೬.೨೭ |
| ವಿಜಾಪುರ | ೫೭.೦೧ | ೬೯.೯೪ | ೪೩.೪೭ | ೪೨.೫೩ | ೫೯.೮೫ | ೨೪.೭೧ |
| ಗದಗ | ೬೬.೧೧ | ೭೯.೩೨ | ೫೨.೫೨ | ೫೬.೩೬ | ೭೨.೫೮ | ೪೦.೬೩ |
| ಧಾರವಾಡ | ೭೧.೬೧ | ೮೦.೮೨ | ೬೧.೯೨ | ೬೪.೧೭ | ೭೫.೮೦ | ೫೧.೯೦ |
| ಉತ್ತರ ಕನ್ನಡ | ೭೬.೬೦ | ೮೪.೫೩ | ೬೮.೪೭ | ೭೧.೦೩ | ೮೦.೮೧ | ೬೧.೦೩ |
| ಹಾವೇರಿ | ೬೭.೭೯ | ೭೭.೬೧ | ೫೭.೩೭ | ೫೮.೪೨ | ೭೧.೧೦ | ೪೪.೮೯ |
| ಬೆಂಗಳೂರು (ಗ್ರಾ) | ೬೪.೭೦ | ೭೩.೯೯ | ೫೪.೯೯ | ೫೫.೭೫ | ೬೭.೪೪ | ೪೩.೫೯ |
| ಬೆಂಗಳೂರು ನಗರ | ೮೨.೯೬ | ೮೭.೯೨ | ೭೭.೪೮ | ೭೯.೪೮ | ೮೫.೫೫ | ೭೨.೬೮ |
| ಚಿತ್ರದುರ್ಗ | ೬೪.೪೫ | ೭೪.೬೬ | ೫೩.೭೮ | ೫೪.೮೨ | ೬೭.೮೦ | ೪೧.೨೫ |
| ದಾವಣಗೆರೆ | ೬೭.೪೩ | ೭೬.೩೭ | ೫೮.೦೪ | ೫೮.೫೩ | ೬೮.೯೮ | ೪೬.೪೭ |
| ಕೋಲಾರ | ೬೨.೮೪ | ೭೩.೧೭ | ೫೨.೨೩ | ೫೨.೭೮ | ೬೫.೯೩ | ೩೯.೩೦ |
| ಶಿವಮೊಗ್ಗ | ೭೪.೫೨ | ೮೨.೦೧ | ೬೬.೮೮ | ೬೮.೪೩ | ೭೭.೬೯ | ೫೯.೦೨ |
| ತುಮಕೂರು | ೬೭.೦೧ | ೭೬.೭೮ | ೫೭.೯೪ | ೫೮.೯೨ | ೭೧.೦೦ | ೪೬.೫೨ |
| ಮೈಸೂರು | ೬೩.೪೮ | ೭೦.೮೮ | ೫೫.೮೧ | ೩೭.೨೬ | ೪೬.೫೯ | ೨೭.೫೬ |
| ದಕ್ಷಿಣ ಕನ್ನಡ | ೮೩.೩೫ | ೮೯.೭೦ | ೭೭.೨೧ | ೭೯.೬೬ | ೮೭.೩೪ | ೭೨.೩೧ |
| ಚಿಕ್ಕಮಗಳೂರು | ೭೨.೨೦ | ೮೦.೨೨೯ | ೬೪.೦೧ | ೬೫.೮೮ | ೭೫.೭೮ | ೫೫.೯೦ |
| ಹಾಸನ | ೬೮.೬೩ | ೭೮.೩೭ | ೫೯.೦೦ | ೬೧.೨೪ | ೭೩.೧೮ | ೪೯.೪೯ |
| ಉಡುಪಿ | ೮೧.೨೫ | ೮೮.೨೩ | ೭೫.೧೯ | ೭೭.೧೯ | ೮೩.೨೭ | ೭೨.೧೦ |
| ಕೊಡಗು | ೭೭.೯೯ | ೮೩.೭೦ | ೭೨.೨೬ | ೭೩.೧೧ | ೮೦.೦೫ | ೬೬.೧೮ |
| ಚಾಮರಾಜನಗರ | ೫೦.೮೭ | ೪೭.೩೧ | ೨೮.೬೦ | ೩೯.೩೩ | ೪೯.೩೬ | ೨೯.೦೪ |
| ಮಂಡ್ಯ | ೬೧.೦೫ | ೭೦.೫೦ | ೫೧.೫೩ | ೫೧.೮೩ | ೬೩.೪೩ | ೪೦.೨೦ |
| ಕರ್ನಾಟಕ | ೬೬.೬೪ | ೭೬.೧೦ | ೫೬.೮೭ | ೫೭.೬೯ | ೬೯.೯೫. | ೪೫.೩೫. |

ಮೂಲ : ಸೆನ್ಸಸ್ ಆಫ್ ಇಂಡಿಯಾ-೨೦೦೧. ಕರ್ನಾಟಕ. ಸಿರೀಸ್ ೩೦. ಪ್ರೈಮರಿ ಸೆನ್ಸಸ್ ಅಬ್‌ಸ್ಟ್ರಾಕ್ಟ್, ಡೈರಕ್ಟೋರೇಟ್ ಆಫ್ ಸೆನ್ಸಸ್ ಆಪರೇಶನ್, ಕರ್ನಾಟಕ. ಪುಟಗಳು : ೨೧-೧೪.

ಇದು ಹಿಂದುಳಿದ ಪ್ರದೇಶವಾದ ಗುಲಬರ್ಗಾ ವಿಭಾಗದಲ್ಲಿ ಕ್ರಮವಾಗಿ ಶೇ.೨೪.೮೦ ಮತ್ತು ಶೇ.೩೨.೯೬ ಅಂಶಗಳಷ್ಟಿದೆ. ಹಿಂದುಳಿದ ಪ್ರದೇಶದಲ್ಲಿನ ಲಿಂಗ ಅಸಮಾನತೆಯ ಬೃಹತ್ ರೂಪವನ್ನು ಇದು ಅನಾವರಣ ಮಾಡುತ್ತಿದೆ. ಈ ಭಿನ್ನತೆಗೆ ಮುಖ್ಯ ಕಾರಣವೇನೆಂದರೆ +೧೫ ವರ್ಷಕ್ಕಿಂತ ಹೆಚ್ಚಿನ ವಯೋಮಾನದಲ್ಲಿ ಮಹಿಳೆಯರ ಸಾಕ್ಷರತೆಯ ಪ್ರಮಾಣ ಅತ್ಯಂತ ಕೆಳಮಟ್ಟದಲ್ಲಿರುತ್ತದೆ(ಶೇ.೪೫.೩೫). ಲಿಂಗ ಅಸಮಾನತೆಯು +೧೫ ವರ್ಷಕ್ಕಿಂತ ಮೇಲಿನ ವಯೋಮಾನದಲ್ಲಿ ಅಧಿಕವಿರುತ್ತದೆ ಮತ್ತು +೧೫ ವಯೋಮಾನಕ್ಕಿಂತ ಕಡಿಮೆಯಿರುವವರಲ್ಲಿ ಕೆಳಮಟ್ಟದಲ್ಲಿರುತ್ತದೆ. ಈ 'ಲಿಂಗ ಸಮಾನತೆ' ಎಂಬ ಸಂಗತಿಯು ಇತ್ತೀಚಿಗೆ ಮಹತ್ವವನ್ನು ಪಡೆದುಕೊಳ್ಳತೊಡಗಿದೆ. ಇದನ್ನು ನಿವಾರಿಸುವುದರ ಬಗ್ಗೆ ಇಂದು ಹೆಚ್ಚಿನ ಗಮನ ನೀಡಲಾಗುತ್ತಿದೆ. ಅನೇಕ ವಿಶೇಷ ಕಾರ್ಯಕ್ರಮಗಳನ್ನು ಇದಕ್ಕಾಗಿ ಹಮ್ಮಿಕೊಳ್ಳಲಾಗಿದೆ. ಈ ಕಾರಣದಿಂದಾಗಿ +೭ ವರ್ಷದಿಂದ ೧೪ ವರ್ಷದವರೆಗಿನ ಮಕ್ಕಳಲ್ಲಿ ಶಾಲಾ ದಾಖಲಾತಿಯು ನೂರಕ್ಕೆ ನೂರರಷ್ಟಿರುವುದರಿಂದ ಮತ್ತು ಬಾಲಕಿಯರ ದಾಖಲಾತಿ ಪ್ರಮಾಣ ಬಾಲಕರಿಗೆ ಸುಮಾರು ಸಮವಾಗಿರು ವುದರಿಂದ ಇಲ್ಲಿ ಲಿಂಗ ಅಸಮಾನತೆಯು ಕಡಿಮೆಯಾಗಿರುವುದನ್ನು ಗುರುತಿಸಬಹುದಾಗಿದೆ. ಉದಾಹರಣೆಗೆ ೧೯೯೦-೧೯೯೧ರಲ್ಲಿ ೧ರಿಂದ ೧೨ನೇ ತರಗತಿಯಲ್ಲಿ ಬಾಲಕರ ದಾಖಲಾತಿಯು ಶೇ.೭೩.೫೬ರಷ್ಟಿದ್ದರೆ ಬಾಲಕಿಯರ ದಾಖಲಾತಿಯು ಶೇ.೬೨.೧೧ರಷ್ಟಿತ್ತು. ಇಲ್ಲಿ ಲಿಂಗಸಂಬಂಧಿ ಅಂತರ ಶೇ.೧೦.೪೫ ಅಂಶಗಳಷ್ಟಾಗಿದೆ. ಆದರೆ ೨೦೦೩-೨೦೦೪ರಲ್ಲಿ ೧ರಿಂದ ೧೨ನೆಯ ತರಗತಿವರೆಗೆ ಬಾಲಕರ ದಾಖಲಾತಿ ಶೇ.೮೭.೮೨ರಷ್ಟಿದ್ದರೆ ಬಾಲಕಿಯರ ದಾಖಲಾತಿ ಶೇ. ೮೫.೨೧ ರಷ್ಟಿದೆ. ಇಲ್ಲಿ ಅಂತರ ಕೇವಲ ಶೇ.೨.೬೧ ಅಂಶಗಳಷ್ಟಿದೆ. ಶಾಲಾ ದಾಖಲಾತಿಯಲ್ಲಿ ಲಿಂಗಸಂಬಂಧಿ ಅಸಮಾನತೆಯು ತೀವ್ರವಾಗಿ ಕಡಿಮೆಯಾಗುತ್ತಿದೆ. ಇಂದು ಶಾಲಾ ದಾಖಲಾತಿಯ ಪ್ರಮಾಣವೂ ಅಧಿಕ ಮತ್ತು ಲಿಂಗಸಂಬಂಧಿ ಅಂತರವೂ ಕಡಿಮೆ (ವಿವರಗಳಿಗೆ ನೋಡಿ: ಕರ್ನಾಟಕ ಮಾನವ ಅಭಿವೃದ್ಧಿ ವರದಿ-೨೦೦೫). ಆದರೆ +೧೫ ವರ್ಷಕ್ಕೆ ಮೇಲ್ಪಟ್ಟವರಲ್ಲಿ ಲಿಂಗಸಂಬಂಧಿ ಸಾಕ್ಷರತಾ ಅಂತರ ಬಹಳ ಜಾಸ್ತಿ. ಇದಕ್ಕೆ ಚಾರಿತ್ರಿಕ ಕಾರಣಗಳಿವೆ. ಲಿಂಗ ಸಮಾನತೆಯೆಂಬ ಮೌಲ್ಯವು ಸರ್ಕಾರದ ನೀತಿಯಾದುದು ಮತ್ತು ಅದು ಸಮಾಜದಲ್ಲಿ ಮನ್ನಣೆ ಗಳಿಸಿಕೊಳ್ಳತೊಡಗಿದ್ದು ತೀರ ಇತ್ತೀಚಿಗೆ ಎಂಬುದನ್ನು ನಾವು ಗಮನಿಸಬೇಕು. ಈ +೧೫ ವರ್ಷದಿಂದ ಮೇಲ್ಪಟ್ಟ

ವಯಸ್ಕರಲ್ಲಿ ಕಂಡುಬರುವ ಸಾಕ್ಷರತಾ ಅಂತರವನ್ನು ಸರಿಪಡಿಸಲು ಕಷ್ಟಸಾಧ್ಯ. ಇದರಲ್ಲಿ ಪ್ರಾದೇಶಿಕ ಅಸಮಾನತೆಯ ಸಂಗತಿಗಳು ಇವೆ. ಉದಾಹರಣೆಗೆ ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಸಾಕ್ಷರತಾ ಪ್ರಮಾಣ ಮತ್ತು ಶಿಕ್ಷಣ ಉತ್ತಮವಾಗಿದ್ದರೆ, ಬೆಳಗಾವಿ ವಿಭಾಗದ ಜಿಲ್ಲೆಗಳಲ್ಲಿ ಅವು ಮಧ್ಯಮ ಮಟ್ಟದಲ್ಲಿವೆ. ಏಕೆಂದರೆ ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ವಸಾಹತುಶಾಹಿ ಕಾಲಾವಧಿಯಲ್ಲಿ ಜನಾನುರಾಗಿ ಆಡಳಿತ ವೆನ್ನುವುದು ಸರ್.ಎಂ.ವಿಶ್ವೇಶ್ವರಯ್ಯ ಅವರಂತಹ ದಿವಾನರ ಆಡಳಿತದಿಂದ ದೊರೆಯಿತು. ಬಾಂಬೆ ಕರ್ನಾಟಕ ಪ್ರದೇಶಕ್ಕೆ ವಸಾಹತುಶಾಹಿ ಆಡಳಿತದ ಅನುಕೂಲ ದೊರೆಯಿತು. ಆದರೆ ಗುಲಬರ್ಗಾ ವಿಭಾಗದ ಜಿಲ್ಲೆಗಳಿಗೆ ಅಂತಹ ಅನುಕೂಲಗಳಾವುವು ದೊರೆಯಲಿಲ್ಲ. ಇದರ ಪರಿಣಾಮವನ್ನು, ಅಲ್ಲಿರುವ ಇಂದಿನ ಕೆಳಮಟ್ಟದ ಸಾಕ್ಷರತೆ, ಶೈಕ್ಷಣಿಕ ಹಿಂದುಳಿದಿರುವಿಕೆ ಸಮಸ್ಯೆ, ಪ್ರಾದೇಶಿಕ ಅಸಮಾನತೆ, ತೀವ್ರ ಲಿಂಗ ಅಸಮಾನತೆ ಮುಂತಾದ ಸಮಸ್ಯೆಗಳಲ್ಲಿ ನೋಡಬಹುದಾಗಿದೆ.

ಕೊಷ್ಟಕ ೬ರಲ್ಲಿ ಕರ್ನಾಟಕದ ಜಿಲ್ಲೆಗಳಲ್ಲಿನ ಒಟ್ಟು ಮತ್ತು ವಯಸ್ಕರ ಸಾಕ್ಷರತಾ ಪ್ರಮಾಣಗಳನ್ನು ನೀಡಲಾಗಿದೆ. ಈ ವಿವರದ ಆಧಾರದ ಮೇಲೆ ನಾವು ಸಾಕ್ಷರತೆಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯ ಒಂದು ನೆಲೆಯನ್ನು ತಿಳಿದುಕೊಳ್ಳಬಹುದು. ಎಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣವು ಅತ್ಯಂತ ಕೆಳಮಟ್ಟದಲ್ಲಿರುತ್ತದೋ ಮತ್ತು ಲಿಂಗಸಂಬಂಧಿ ಸಾಕ್ಷರತಾ ಅಂತರವು ಅಧಿಕವಾಗಿರುತ್ತದೋ ಆ ಜಿಲ್ಲೆಗಳನ್ನು ಹಿಂದುಳಿದ ಜಿಲ್ಲೆಗಳೆಂದು ಪರಿಗಣಿಸಬಹುದು. ಉದಾಹರಣೆಗೆ ರಾಜ್ಯದ ೨೭ ಜಿಲ್ಲೆಗಳ ಪೈಕಿ ರಾಯಚೂರು, ಕೊಪ್ಪಳ ಮತ್ತು ಗುಲಬರ್ಗಾ ಜಿಲ್ಲೆಗಳಲ್ಲಿ ವಯಸ್ಕ ಮಹಿಳೆಯರ ಸಾಕ್ಷರತೆಯು ಶೇ. ೨೦ಕ್ಕಿಂತ ಕಡಿಮೆಯಿದೆ. ನಾವು ಶೇ. ೩೦ ಸಾಕ್ಷರತೆಯನ್ನು ಮಾನದಂಡ ವಾಗಿಟ್ಟುಕೊಂಡರೆ ಆಗ ರಾಜ್ಯದ ಏಳು ಜಿಲ್ಲೆಗಳಲ್ಲಿ ಅದು ಶೇ. ೩೦ಕ್ಕಿಂತ ಕಡಿಮೆ ಯಿರುವುದು ಕಂಡು ಬರುತ್ತದೆ. ಇವೆಲ್ಲವೂ ಅಭಿವೃದ್ಧಿಯ ದೃಷ್ಟಿಯಿಂದ ಹಿಂದುಳಿದ ಜಿಲ್ಲೆಗಳಾಗಿವೆ. ಈ ಪ್ರಾದೇಶಿಕ ಅಸಮಾನತೆಯ ಬಹುಮುಖ್ಯ ಸೂಚಿಯೆಂದರೆ ಲಿಂಗಸಂಬಂಧಿ ಸಾಕ್ಷರತಾ ಅಂತರ. ರಾಜ್ಯದಲ್ಲಿ ವಯಸ್ಕರ ಸಾಕ್ಷರತೆಗೆ ಸಂಬಂಧಿಸಿದಂತೆ ಲಿಂಗಸಂಬಂಧಿ ಸಾಕ್ಷರತಾ ಅಂತರ ಶೇ. ೩೦ ಅಂಶಗಳಿಗಿಂತ ಅಧಿಕವಿರುವ ಜಿಲ್ಲೆ ಗಳೆಂದರೆ ಬಾಗಲಕೋಟೆ, ವಿಜಾಪುರ, ಗದಗ, ಬೀದರ್, ಬಳ್ಳಾರಿ, ಗುಲಬರ್ಗಾ, ಕೊಪ್ಪಳ ಮತ್ತು ರಾಯಚೂರು. ಇವೆಲ್ಲವೂ ಅಭಿವೃದ್ಧಿಯಲ್ಲಿ ದುಸ್ಥಿತಿಯನ್ನು ಅನುಭವಿಸುತ್ತಿರುವ ಜಿಲ್ಲೆಗಳಾಗಿವೆ. ಹಿಂದುಳಿದಿರುವಿಕೆಗೂ ಮತ್ತು ಲಿಂಗಸಂಬಂಧಿ ಅಸಮಾನತೆಗೂ ನಡುವೆ ಸಂಬಂಧವಿರುವಂತೆ ಕಾಣುತ್ತದೆ. ಇದರ ಆಧಾರದ ಮೇಲೆ



COMMUNITY HEALTH CELL
LIBRARY
and
Information
EDU-100
12635 P10

ಮುಂದುವರಿದ ಜಿಲ್ಲೆಗಳಲ್ಲಿ ಲಿಂಗ ತಾರತಮ್ಯವಿಲ್ಲವೆಂದು ತಿಳಿಯ ಬೇಕಾಗಿಲ್ಲ. ಆದರೆ ಅಲ್ಲಿ ಅದರ ರೂಪ, ಪ್ರಮಾಣ ಮತ್ತು ಗತಿ ಭಿನ್ನವಾಗಿರುತ್ತದೆ. ಉದಾಹರಣೆಗೆ ಉಡುಪಿ ಮತ್ತಯ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಒಟ್ಟು ಸಾಕ್ಷರತೆಗೆ ಸಂಬಂಧಿಸಿದಂತೆ ಲಿಂಗಸಂಬಂಧಿ ಅಂತರ ಕ್ರಮವಾಗಿ ಶೇ. ೧೫.೯೭ ಮತ್ತು ಶೇ. ೧೨.೪೯ ರಷ್ಟಿದ್ದರೆ ವಯಸ್ಕರ ಸಾಕ್ಷರತೆಯಲ್ಲಿ ಲಿಂಗ ಸಂಬಂಧಿ ಅಂತರ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕ್ರಮವಾಗಿ ಶೇ. ೧೧.೧೭ ಮತ್ತು ಶೇ. ೧೫.೦೩ರಷ್ಟಿದೆ. ಈ ಅಧ್ಯಯನವು ಅನೇಕ ರೀತಿಯಲ್ಲಿ ಉಪಯುಕ್ತವಾದ ಸಂಗತಿಗಳನ್ನು ನಮಗೆ ಒದಗಿಸುತ್ತದೆ. ಸಾಕ್ಷರತೆಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯ ನೆಲೆಗಳನ್ನು ಇದು ತೋರಿಸುತ್ತಿದೆ. ಹಿಂದುಳಿದಿರುವಿಕೆಗೂ ಮತ್ತು ಲಿಂಗಸಂಬಂಧಿ ಅಸಮಾನತೆಗೂ ನಡುವೆ ಇರುವ ಅನುಲೋಮ ಸಂಬಂಧವನ್ನು ಇದು ಅನಾವರಣ ಮಾಡುತ್ತಿದೆ. ಸಾಕ್ಷರತೆಯನ್ನು ಉತ್ತಮ ಪಡಿಸಬೇಕಾದರೆ ಪರಿಣಾಮಕಾರಿಯಾದ ಮಾರ್ಗ ಯಾವುದೆಂಬುದನ್ನು ಇದು ತೋರಿಸುತ್ತಿದೆ. ಕೋಷ್ಟಕ ೭ರಲ್ಲಿ ಒಂದು ವಿಚಿತ್ರ ಸಂಗತಿಯನ್ನು ಲಿಂಗಸಂಬಂಧ ವನ್ನು ಕುರಿತಂತೆ ಗುರುತಿಸಬಹುದಾಗಿದೆ, ಒಟ್ಟು ಸಾಕ್ಷರತೆ ಮತ್ತು ವಯಸ್ಕ ಸಾಕ್ಷರತೆಗಳ ನಡುವಿನ ಅಂತರವು ಪುರುಷ ಸಾಕ್ಷರತೆಯಲ್ಲಿರುವುದಕ್ಕಿಂತ ಮಹಿಳೆಯರ ಸಾಕ್ಷರತೆಯಲ್ಲಿ ಅಧಿಕವಾಗಿದೆ. ಉದಾಹರಣೆಗೆ ರಾಜ್ಯದಲ್ಲಿ ವಯಸ್ಕ ಪುರುಷ ಸಾಕ್ಷರತೆಯು ಒಟ್ಟು ಪುರುಷರ ಸಾಕ್ಷರತೆಯ ಶೇ. ೯೧.೯೧ರಷ್ಟಿದ್ದರೆ ವಯಸ್ಕ ಮಹಿಳೆಯರ ಸಾಕ್ಷರತೆಯು ಅವರ ಒಟ್ಟು ಸಾಕ್ಷರತೆಯ ಶೇ.೭೯.೭೪ರಷ್ಟಿದೆ. ಈ ಲಿಂಗ ತಾರತಮ್ಯವು ಹಿಂದುಳಿದ ಜಿಲ್ಲೆಗಳಲ್ಲಿ ತೀವ್ರವಾಗಿದೆ. ರಾಯಚೂರು ಜಿಲ್ಲೆಯಲ್ಲಿ ವಯಸ್ಕ ಪುರುಷರ ಸಾಕ್ಷರತೆಯು ಒಟ್ಟು ಪುರುಷರ ಸಾಕ್ಷರತೆಯ ಶೇ. ೭೬.೨೮ರಷ್ಟಿದ್ದರೆ ಶಿವಮೊಗ್ಗ ಜಿಲ್ಲೆಯಲ್ಲಿ ಅದು ಶೇ. ೯೪.೭೩ರಷ್ಟಿದೆ. ಅಂದಮೇಲೆ ಹಿಂದುಳಿದಿರುವಿಕೆಗೂ ಮತ್ತು ಲಿಂಗಸಂಬಂಧಿ ಅಸಮಾನತೆಗೂ ನಡುವೆ ಸಂಬಂಧವಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಕೋಷ್ಟಕ-೭ರಲ್ಲಿ ಒಟ್ಟು ಸಾಕ್ಷರತೆಗೆ ಸಂಬಂಧಿಸಿದಂತೆ ಲಿಂಗಸಂಬಂಧಿ ಸಾಕ್ಷರತಾ ಅಂತರವನ್ನು ಜಿಲ್ಲಾವಾರು ಲೆಕ್ಕ ಹಾಕಿ ತೋರಿಸಲಾಗಿದೆ.

ಲಿಂಗಸಂಬಂಧಿ ಸಾಕ್ಷರತಾ ಅಂತರ ಶೇ.೨೦ಕ್ಕಿಂತ ಅಧಿಕವಿರುವ ಜಿಲ್ಲೆಗಳಾವುವೆಂದರೆ ಗುಲಬರ್ಗಾ ವಿಭಾಗದ ಬೀದರ್, ಬಳ್ಳಾರಿ, ರಾಯಚೂರು, ಕೊಪ್ಪಳ ಮತ್ತು ಗುಲಬರ್ಗಾ ಹಾಗೂ ಬೆಳಗಾವಿ ವಿಭಾಗದ ವಿಜಾಪುರ, ಬಾಗಲಕೋಟೆ, ಬೆಳಗಾವಿ, ಹಾವೇರಿ ಮತ್ತು ಗದಗ ಜಿಲ್ಲೆಗಳು ಹಾಗೂ ಬೆಂಗಳೂರು ವಿಭಾಗದ ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳು.

## ಕರ್ನಾಟಕದಲ್ಲಿ ಜಿಲ್ಲಾವಾರು ಮತ್ತು ಲಿಂಗವಾರು ಸಾಕ್ಷರತಾ ಪ್ರಮಾಣ: ೨೦೦೧.

ಕೋಷ್ಟಕ-೭

| ಜಿಲ್ಲೆಗಳು | ಒಟ್ಟು | ಪುರುಷರು | ಮಹಿಳೆಯರು | ಲಿಂಗ ಸಂಬಂಧಿ ಸಾಕ್ಷರತಾ ಅಂತರ |
|---|---|---|---|---|
| ಬೀದರ್ | ೬೦.೯೪ | ೭೨.೪೬ | ೪೮.೮೧ | ೨೩.೬೫ |
| ಬಳ್ಳಾರಿ | ೫೭.೪೦ | ೬೯.೨೦ | ೪೫.೨೮ | ೨೩.೯೨ |
| ಗುಲಬರ್ಗಾ | ೫೦.೦೧ | ೬೧.೭೭ | ೩೭.೯೦ | ೨೩.೮೭ |
| ರಾಯಚೂರು | ೪೮.೮೧ | ೬೧.೫೨ | ೩೫.೯೩ | ೨೫.೬೨. |
| ಕೊಪ್ಪಳ | ೫೪.೧೦ | ೬೮.೪೩ | ೩೯.೬೧ | ೨೮.೮೨ |
| ಬೆಳಗಾಂ | ೬೪.೨೧ | ೭೫.೭೦ | ೫೨.೩೨ | ೨೩.೩೮ |
| ಬಾಗಲಕೋಟೆ | ೫೭.೩೦ | ೭೦.೮೮ | ೪೩.೫೬ | ೨೭.೩೨ |
| ವಿಜಾಪುರ | ೫೭.೦೧ | ೬೯.೯೪ | ೪೩.೪೭ | ೨೬.೪೭ |
| ಗದಗ | ೬೬.೧೧ | ೭೯.೩೨ | ೫೨.೫೨ | ೨೬.೮೦ |
| ಧಾರವಾಡ | ೭೧.೬೧ | ೮೦.೮೨ | ೬೧.೯೨ | ೧೮.೯೦ |
| ಉತ್ತರ ಕನ್ನಡ | ೭೬.೬೦ | ೮೪.೫೩ | ೬೮.೪೭ | ೧೬.೦೮ |
| ಹಾವೇರಿ | ೬೭.೭೯ | ೭೭.೬೧ | ೫೭.೩೭ | ೨೦.೨೪ |
| ಬೆಂಗಳೂರು(ಗ್ರಾ) | ೬೪.೭೦ | ೭೩.೯೯ | ೫೪.೯೯ | ೧೯.೦೦ |
| ಬೆಂಗಳೂರು(ನ) | ೮೨.೯೬ | ೮೭.೯೨ | ೭೭.೪೮ | ೧೦.೪೪ |
| ಚಿತ್ರದುರ್ಗ | ೬೪.೪೫ | ೭೪.೬೬ | ೫೩.೭೮ | ೨೦.೮೮ |
| ದಾವಣಗೆರೆ | ೬೭.೪೩ | ೭೬.೩೭ | ೫೮.೦೪ | ೧೮.೩೩ |
| ಕೋಲಾರ | ೬೨.೮೪ | ೭೩.೧೭ | ೫೨.೨೩ | ೨೦.೯೪ |
| ಶಿವಮೊಗ್ಗ | ೭೪.೫೨ | ೮೨.೦೧ | ೬೬.೮೮ | ೧೫.೧೩ |
| ತುಮಕೂರು | ೬೭.೦೧ | ೭೬.೭೮ | ೫೬.೯೪ | ೧೯.೮೪ |
| ಮೈಸೂರು | ೬೩.೪೮ | ೭೦.೮೮ | ೫೫.೮೧ | ೧೫.೦೭ |
| ದಕ್ಷಿಣ ಕನ್ನಡ | ೮೩.೩೫ | ೮೯.೭೦ | ೭೭.೨೧ | ೧೨.೪೯ |
| ಚಿಕ್ಕಮಗಳೂರು | ೭೨.೨೦ | ೮೦.೨೨ | ೬೪.೦೧ | ೧೬.೨೧ |
| ಹಾಸನ | ೬೮.೬೩ | ೭೮.೩೭ | ೫೯.೦೦ | ೧೯.೩೭ |
| ಉಡುಪಿ | ೮೧.೨೫ | ೮೮.೨೩ | ೭೫.೧೯ | ೧೩.೦೪ |
| ಕೊಡಗು | ೭೭.೯೯ | ೮೩.೭೦ | ೭೨.೨೬ | ೧೧.೪೪ |
| ಚಾಮರಾಜನಗರ | ೫೦.೮೭ | ೪೭.೩೧ | ೨೮.೬೦ | ೧೮.೭೧ |
| ಮಂಡ್ಯ | ೬೧.೦೫ | ೭೦.೫೦ | ೫೧.೫೩ | ೧೮.೯೭ |
| ಕರ್ನಾಟಕ | ೬೬.೬೪ | ೭೬.೧೦. | ೫೬.೮೭. | ೧೯.೨೩. |

ಮೂಲ : ಕರ್ನಾಟಕ ಸರ್ಕಾರ. ೨೦೦೬ ಕರ್ನಾಟಕ ಮಾನವ ಅಭಿವೃದ್ಧಿ ವರದಿ- ೨೦೦೫. ಯೋಜನಾ ವಿಭಾಗ,

ಮಹಿಳೆಯರ ಸಾಕ್ಷರತೆಯನ್ನು ಪರಿಭಾವಿಸಿಕೊಂಡಿರುವ ಸಂಗತಿ ಕುತೂಹಲ ಕಾರಿಯಾಗಿದೆ. ಪುರುಷಶಾಹಿ ಪ್ರಣೀತ ಸಾಮಾಜಿಕೀಕರಣ ಮತ್ತು ಸಂತಾನೋತ್ಪತ್ತಿ ಕೇಂದ್ರಿತ ಲಿಂಗಸಂಬಂಧಿ ಪ್ರಣಾಳಿಕೆಗಳಿಂದಾಗಿ ಮಹಿಳೆಯರ ಸಾಕ್ಷರತೆಯು ನಮ್ಮ ಸಮಾಜದಲ್ಲಿ ಕೆಳಮಟ್ಟದಲ್ಲಿದೆ. ಅದು ಅಬಿರೇಶನ್ ಅಲ್ಲ. ಅದು ಲಿಂಗ ತಾರತಮ್ಯ ಮೌಲ್ಯವು ಸಮಾಜದಲ್ಲಿ ಆಳವಾಗಿ ನೆಲೆಯೂರಿರುವುದರಿಂದ ಉಂಟಾಗಿರುವ ವಿಕೃತಿ. ಮಹಿಳೆಯರ ಸಾಕ್ಷರತೆಯ ಅಗತ್ಯವನ್ನು ಅವರ ವ್ಯಕ್ತಿತ್ವದ ಆಧಾರದ ಮೇಲೆ ನಿರ್ಣಯಿಸು ವುದಕ್ಕೆ ಪ್ರತಿಯಾಗಿ ಅದನ್ನು ಅವರು ನಿರ್ವಹಿಸುವ ದೈಹಿಕ ಕರ್ತವ್ಯದ ಆಧಾರದ ಮೇಲೆ ನಿರ್ಣಯಿಸಲಾಗುತ್ತಿದೆ. 'ಹೆಣ್ಣೊಬ್ಬಳು ಕಲಿತರೆ ಶಾಲೆಯೊಂದನ್ನು ತೆರೆದಂತೆ' ಎಂಬ ಪ್ರಸಿದ್ಧ ಘೋಷಣೆಯ ಅರ್ಥವೇನು?. 'ಮನೆಯೆ ಮೊದಲ ಪಾಠಶಾಲೆ, ತಾಯಿ ಮೊದಲ ಗುರು' ಎಂಬ ಘೋಷಣೆಯ ಅರ್ಥವೂ ಅತ್ಯಂತ ಲಿಂಗ ತಾರತಮ್ಯ ದಿಂದ ಕೂಡಿದೆ. ಮನುಸ್ಮೃತಿಯಲ್ಲಿನ ಒಂದು ಸೂತ್ರವು ಇದನ್ನು ಯಾವುದೇ ಅನುಮಾನವಿಲ್ಲದಂತೆ ಸ್ಪಷ್ಟಪಡಿಸುತ್ತದೆ. ಆ ಶ್ಲೋಕ ಹೀಗಿದೆ: 'ಪಿತಾ ರಕ್ಷತಿ ಕೌಮಾರ್ಯೆ, ಭರ್ತಾ ರಕ್ಷತಿ ಯೌವನೇ, ರಕ್ಷತಿ ಪುತ್ರಃ ಸ್ಥವಿರೇನ ಸ್ತ್ರೀ ಸ್ವಾತಂತ್ರ್ಯಮರ್ಹತಿಃ'. ಸ್ವಾತಂತ್ರ್ಯವೆನ್ನುವುದನ್ನು ಮಹಿಳೆಯರಿಗೆ ನಿರಾಕರಿಸಲಾಗಿದೆ. ಈ ಬಗೆಯ ಚಾರಿತ್ರಿಕ ಪರಿಣಾಮವಾಗಿ ನಮ್ಮಲ್ಲಿ ಇಂದು ಲಿಂಗಸಂಬಂಧಿ ಸಾಕ್ಷರತಾ ಅಸಮಾನತೆಯು ಕಾಣುತ್ತಿದೆ. ಮಹಿಳೆಯ ಬದುಕು ತನಗಾಗಿ ಅಲ್ಲ ಎಂಬುದನ್ನು ಇವು ಗಟ್ಟಿಗೊಳಿಸುತ್ತವೆ. ಅವಳ ಬದುಕು ಮತ್ತೊಬ್ಬರಿಗಾಗಿ ಅಥವಾ ಮತ್ತೊಂದಕ್ಕಾಗಿ ಇದೆ ಎಂಬಂತಹ ಮೌಲ್ಯವನ್ನು ಇಂತಹ ಘೋಷಣೆಗಳು ಊರ್ಜಿತಗೊಳಿಸುತ್ತದೆ. ಮಹಿಳೆಯರು ಸಾಕ್ಷರ ರಾಗಬೇಕು ಎಂಬುದಕ್ಕೆ ಕೊಡುವ ಕಾರಣಗಳಲ್ಲಿ ಆಕೆಯನ್ನು ಒಬ್ಬ ವ್ಯಕ್ತಿಯನ್ನಾಗಿ ಪರಿಭಾವಿಸಿಕೊಳ್ಳುವ ಕ್ರಮಕ್ಕೆ ಪ್ರತಿಯಾಗಿ ಅವಳನ್ನು ಕುಟುಂಬದ, ಗಂಡನ, ಮಕ್ಕಳ ಹಿತಾಸಕ್ತಿಯನ್ನು ಕಾಪಾಡುವ ಒಂದು ಸಾಧನವಾಗಿ ಮಾತ್ರ ಎಂಬ ನೆಲೆಯಲ್ಲಿ ಪರಿಭಾವಿಸಿಕೊಳ್ಳುವುದು ಕಂಡು ಬರುತ್ತದೆ. ಮಹಿಳೆಯು ಅಕ್ಷರಸ್ಥಳಾದರೆ ಅವಳು ಆದರ್ಶ ತಾಯಿಯಾಗುತ್ತಾಳೆ, ಅವಳು ವಿಧೇಯ ಹೆಂಡತಿಯಾಗುತ್ತಾಳೆ ಎಂದು ನಂಬಲಾಗಿದೆ. ಮಹಿಳೆಯರ ಸಾಕ್ಷರತಾ ಪ್ರಮಾಣ ಹೆಚ್ಚುವುದರಿಂದ ಜನಸಂಖ್ಯಾ ಬೆಳವಣಿಗೆಯ ಪ್ರಮಾಣ ಕಡಿಮೆಯಾಗುತ್ತದೆ ಅಥವಾ ಕುಟುಂಬ ನಿಯಂತ್ರಣ ಸಾಧ್ಯವಾಗುತ್ತದೆ ಮತ್ತು ಅದರಿಂದ ಜನನ ಪ್ರಮಾಣವು ಕಡಿಮೆಯಾಗುತ್ತದೆ ಮುಂತಾದ ಕಾರಣಗಳನ್ನು ಇಲ್ಲಿ ನೀಡಲಾಗುತ್ತದೆ. ಅನೇಕ ಅಧ್ಯಯನಗಳಲ್ಲಿ ಇದನ್ನು ಉಪಕರಣವಾದಿ ದೃಷ್ಟಿಕೋನವೆಂದು ಕರೆಯಲಾಗಿದೆ. ಮಹಿಳೆಯರು ತಮಗಾಗಿ ಅಕ್ಷರಸ್ಥರಾಗುವ ಕ್ರಮಕ್ಕೆ ಸಮಾಜದಲ್ಲಿ ಹೆಚ್ಚು ಆಸ್ಪದವಿಲ್ಲ. ಮಹಿಳೆಯರು ಹೆಚ್ಚು ಓದಿ ಬಿಟ್ಟರೆ ಅವರು 'ದಾರಿ ಬಿಟ್ಟು ಬಿಡುತ್ತಾರೆ' ಎಂಬ ನಂಬಿಕೆ ಇಂದಿಗೂ ನಮ್ಮ ಸಮಾಜದಲ್ಲಿದೆ. ಈ ಬಗೆಯ ನಂಬಿಕೆಯಿಂದಾಗಿಯೇ ಇಂದು ನಮ್ಮ ಸಮಾಜದ ಸಂದರ್ಭದಲ್ಲಿ ಸಾಕ್ಷರತೆಗೆ ಸಂಬಂಧಿಸಿದಂತೆ ತೀವ್ರ ಲಿಂಗಸಂಬಂಧಿ ಅಂತರ ಕಂಡು ಬರುತ್ತಿದೆ.

### ಭಾಗ-೫

## ಕರ್ನಾಟಕದಲ್ಲಿ ಗ್ರಾಮೀಣ ಮತ್ತು ನಗರ ಸಾಕ್ಷರತೆಗಳಲ್ಲಿನ ಅಂತರ

ಸಾಕ್ಷರತೆಗೆ ಸಂಬಂಧಿಸಿದಂತೆ ನಮ್ಮ ಸಂದರ್ಭದಲ್ಲಿ ಚರ್ಚೆ ಮಾಡಬೇಕಾಗಿರುವ ಸಂಗತಿ ಯಾವುದೆಂದರೆ ಗ್ರಾಮೀಣ ಸಾಕ್ಷರತಾ ಪ್ರಮಾಣ. ಏಕೆಂದರೆ ನಮ್ಮಲ್ಲಿ ಇಂದಿಗೂ ಶೇ೬೬ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ರಾಜ್ಯದ ಕೆಲವು ಹಿಂದುಳಿದ ಜಿಲ್ಲೆಗಳಲ್ಲಿ ಗ್ರಾಮೀಣ ವಾಸಿಗಳ ಪ್ರಮಾಣ ಶೇ ೭೦ ದಾಟಿದೆ. ಅಂದಾಗ ನಾವು ಗ್ರಾಮೀಣ ಮಟ್ಟದಲ್ಲಿ ಸಾಕ್ಷರತೆಗೆ ಸಂಬಂಧಿಸಿದಂತೆ ಸ್ಥಿತಿ ಏನಿದೆ ಎಂಬುದನ್ನು ಪರಿಶೀಲಿಸುವುದು ಅಗತ್ಯ. ಪ್ರಸ್ತುತ ಭಾಗದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಸಾಕ್ಷರತೆಗೆ ಸಂಬಂಧಿಸಿದ ಸಂಗತಿಗಳನ್ನು ಚರ್ಚಿಸಲಾಗಿದೆ. ಕರ್ನಾಟಕದಲ್ಲಿ ಗ್ರಾಮೀಣ ಮತ್ತು ನಗರ ಸಾಕ್ಷರತೆಯ ವಿವರಗಳನ್ನು ಕೋಷ್ಟಕ ೮ರಲ್ಲಿ ನೀಡಲಾಗಿದೆ.

**ಕರ್ನಾಟಕದಲ್ಲಿ ಗ್ರಾಮೀಣ ಮತ್ತು ನಗರ ಸಾಕ್ಷರತಾ ಪ್ರಮಾಣ: ೧೯೯೧ ಮತ್ತು ೨೦೦೧.**

**ಕೋಷ್ಟಕ ೮**

| ವಿವರಗಳು | ಗ್ರಾಮೀಣ ಸಾಕ್ಷರತೆ | ನಗರ ಸಾಕ್ಷರತೆ | ಗ್ರಾಮೀಣ ಮತ್ತು ನಗರ ನಡುವಿನ ಅಂತರ. (ಶೇಕಡ ಅಂಶಗಳು) |
|---|---|---|---|
| ೧೯೯೧ | | | |
| ಒಟ್ಟು(ಶೇ) | ೪೭.೬೯ | ೭೪.೨೦ | ೨೬.೫೧ |
| ಪುರುಷರು(ಶೇ) | ೬೦.೩೦ | ೮೨.೦೪. | ೨೧.೭೪ |
| ಮಹಿಳೆಯರು(ಶೇ) | ೩೪.೭೬ | ೬೫.೭೪ | ೩೨.೯೮ |
| ಲಿಂಗ ಸಂಬಂದಿ ಸಾಕ್ಷರತಾ ಅಂತರ | ೨೫.೫೪ | ೧೬.೩೦ | - - |
| ೨೦೦೧ | | | |
| ಒಟ್ಟು(ಶೇ) | ೫೯.೩೩ | ೮೦.೫೮ | ೨೧.೨೫ |
| ಪುರುಷರು(ಶೇ) | ೭೦.೪೫ | ೮೬.೬೬ | ೧೬.೨೧ |
| ಮಹಿಳೆಯರು(ಶೇ) | ೪೮.೦೧ | ೭೪.೧೩ | ೨೬.೧೨ |
| ಲಿಂಗ ಸಂಬಂದಿ ಸಾಕ್ಷರತಾ ಅಂತರ (ಶೇಕಡ ಅಂಶಗಳು) | ೨೨.೪೪. | ೧೨.೫೩. | - - |

ಮೂಲ : ಕರ್ನಾಟಕ ಸರ್ಕಾರ. ೨೦೦೬. ಕರ್ನಾಟಕ ಮಾನವ ಅಭಿವೃದ್ಧಿ ವರದಿ- ೨೦೦೫. ಯೋಜನಾ ವಿಭಾಗ, ಪು: ೩೭೮-೩೭೯.

ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವಿನ ಲಿಂಗಸಂಬಂಧಿ ಸಾಕ್ಷರತಾ ಅಂತರದಲ್ಲಿಯೂ ಲಿಂಗ ತಾರತಮ್ಯವು ತೀವ್ರವಾಗಿರುವುದನ್ನು ಮೇಲಿನ ಕೋಷ್ಟಕದಲ್ಲಿ ತೋರಿಸಲಾಗಿದೆ. ಒಂದು ಸಮಾಧಾನಕರ ಸಂಗತಿಯೆಂದರೆ ಈ ಅಂತರವು ಕಡಿಮೆಯಾಗುತ್ತಿದೆ. ಗ್ರಾಮೀಣ ಮತ್ತು ನಗರಗಳಿಗೆ ಸಂಬಂಧಿಸಿದಂತೆ ಲಿಂಗಸಂಬಂಧಿ ಸಾಕ್ಷರತಾ ಅಂತರವು ೧೯೯೧ರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶೇ. ೨೫.೫೪ ಅಂತಗಳಷ್ಟಿದ್ದುದು ೨೦೦೧ರಲ್ಲಿ ಅದು ಶೇ. ೨೨.೪೪ ಅಂಶಗಳಿಗೆ ಕಡಿಮೆಯಾಗಿದೆ. ಅದೇ ರೀತಿಯಲ್ಲಿ ನಗರ ಪ್ರದೇಶದಲ್ಲಿ ಅದು ೧೯೯೧ರಲ್ಲಿ ಶೇ. ೧೬.೩೦ರಷ್ಟಿದ್ದುದು ೨೦೦೧ರಲ್ಲಿ ಶೇ. ೧೨.೫೩ ಅಂಶಗಳಿಗೆ ಕಡಿಮೆಯಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಲಿಂಗಸಂಬಂಧಿ ಸಾಕ್ಷರತಾ ಅಂತರವು ನಗರ ಪ್ರದೇಶದಲ್ಲಿರುವುದಕ್ಕಿಂತ ಗ್ರಾಮೀಣ ಪ್ರದೇಶದಲ್ಲಿ ಅಧಿಕವಾಗಿದೆ. ಇಲ್ಲಿ ಎರಡು ಬಗೆಯ ಅಸಮಾನತೆಗಳು ನಮ್ಮ ಮುಂದಿವೆ. ಮೊದಲನೆಯದು ಗ್ರಾಮೀಣ ಮತ್ತು ನಗರ ನಡುವಿನ ಅಂತರವಾದರೆ ಎರಡನೆಯದು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಲಿಂಗಸಂಬಂಧಿ ಸಾಕ್ಷರತಾ ಅಂತರ. ಇವೆರಡನ್ನೂ ನಾವು ಏಕಕಾಲದಲ್ಲಿ ಎದುರಿಸಬೇಕಾಗಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವಿನ ಅಂತರಗಳನ್ನು ಗಮನಿಸಿದರೆ ಸಾಕಾಗುವುದಿಲ್ಲ. ಇಲ್ಲಿ ನಾವು ಪ್ರಜ್ಞಾಪೂರ್ವಕವಾಗಿ ಲಿಂಗಸಂಬಂಧಿ ಅಸಮಾನತೆಗಳನ್ನು ಗಮನಿಸಬೇಕು. ಅದರ ನಿವಾರಣೆಗೂ ಪ್ರಯತ್ನಿಸಬೇಕಾಗುತ್ತದೆ. ಹಾಗೆ ನೋಡಿದರೆ ಕರ್ನಾಟಕದಲ್ಲಿ ಗ್ರಾಮೀಣ ಮಹಿಳೆಯರ ಸಾಕ್ಷರತಾ ಪ್ರಮಾಣ ೨೦೦೧ರಲ್ಲಿಯೂ ಶೇ.೫೦ ಮೀರಿಲ್ಲ.

**ಗ್ರಾಮೀಣ ಪರಿಶಿಷ್ಟ ಮಹಿಳೆಯರ ಸಾಕ್ಷರತಾ ಪ್ರಮಾಣ**

ನಮ್ಮ ಸಂದರ್ಭದಲ್ಲಿ ಅಭಿವೃದ್ಧಿಯ ದೃಷ್ಟಿಯಿಂದ ಅತ್ಯಂತ ತೀವ್ರತರವಾದ ದುಸ್ಥಿತಿಯನ್ನು ಅನುಭವಿಸುತ್ತಿರುವವರೆಂದರೆ ಗ್ರಾಮೀಣ ಪರಿಶಿಷ್ಟ ಮಹಿಳೆಯರು. ಇದನ್ನು ಸಾಕ್ಷರತೆಗೆ ಸಂಬಂಧಿಸಿದಂತೆ ಇಲ್ಲಿ ತೋರಿಸಲಾಗಿದೆ.

**ಸಾಮಾಜಿಕ ಗುಂಪುವಾರು ಮಹಿಳೆಯರ ಸಾಕ್ಷರತಾ ಪ್ರಮಾಣ : ೨೦೦೧**

**ಕೋಷ್ಟಕ: ೯**

| ಕ್ರಸಂ. | ಗ್ರಾಮೀಣ ಮಹಿಳೆಯರ ಸಾಕ್ಷರತಾ ಪ್ರಮಾಣ ೨೦೦೧ ವಿವರಗಳು | ಸಾಕ್ಷರತಾ ಪ್ರಮಾಣ(ಶೇ) |
|---|---|---|
| ೧ | ಗ್ರಾಮೀಣ ಒಟ್ಟು ಮಹಿಳೆಯರು | ಶೇ.೪೮.೦೧ |
| ೨ | ಗ್ರಾಮೀಣ ಪರಿಶಿಷ್ಟ ಜಾತಿ ಮಹಿಳೆಯರು | ಶೇ.೩೫.೫೬ |
| ೩ | ಗ್ರಾಮೀಣ ಪರಿಶಿಷ್ಟ ಪಂಗಡ ಮಹಿಳೆಯರು | ಶೇ.೩೩.೩೧ |

ಮೂಲ : ಸೆನ್ಸಸ್ ಆಫ್ ಇಂಡಿಯಾ-೨೦೦೧. ಕರ್ನಾಟಕ. ಸಿರೀಸ್ ೩೦. ಪ್ರೈಮರಿ ಸೆನ್ಸಸ್ ಅಬ್‌ಸ್ಟ್ರಾಕ್ಟ್ ಡೈರೆಕ್ಟೊರೇಟ್ ಆಫ್ ಸೆನ್ಸಸ್ ಆಪರೇಶನ್, ಕರ್ನಾಟಕ. ಪುಟಗಳು : ೯

ಕೋಷ್ಟಕ ೯ ರಲ್ಲಿ ತೋರಿಸಿರುವಂತೆ ನಮ್ಮ ಸಮಾಜದ ಸಂದರ್ಭದಲ್ಲಿ ಸಾಕ್ಷರತೆಯು ಸಾಮಾಜಿಕ ಶ್ರೇಣೀಕರಣಕ್ಕೆ ಅನುಗುಣವಾಗಿದೆ. ಒಟ್ಟು ಮಹಿಳೆಯರದ್ದು ಶೇ. ೪೮.೦೧ರಷ್ಟಾದರೆ ಪ.ಜಾ. ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ.೩೫.೫೬. ಆದರೆ ಗ್ರಾಮೀಣ ಪರಿಶಿಷ್ಟ ಪಂಗಡ ಮಹಿಳೆಯರ ಸಾಕ್ಷರತಾ ಪ್ರಮಾಣ ೨೦೦೧ರಲ್ಲಿ ಶೇ. ೩೩.೩೧. ಇಲ್ಲಿ ನೀಡಿರುವ ಅಂಕಿಗಳು ಇಡೀ ಕರ್ನಾಟಕಕ್ಕೆ ಸಂಬಂಧಿಸಿವೆ. ಇದಕ್ಕೆ ಪ್ರತಿಯಾಗಿ ಜಿಲ್ಲಾ ಮಟ್ಟದಲ್ಲಿ ಇದನ್ನು ಪರಿಗಣಿಸಿದರೆ ನಮಗೆ ಆತಂಕಕಾರಿ ಸಂಗತಿಯು ಎದುರಾಗುತ್ತವೆ. ಉದಾಹರಣೆಗೆ ರಾಯಚೂರು ಜಿಲ್ಲೆಯ ಗ್ರಾಮೀಣ ಪರಿಶಿಷ್ಟ ಜಾತಿ ಮಹಿಳೆಯರ ಸಾಕ್ಷರತಾ ಪ್ರಮಾಣ ೨೦೦೧ರಲ್ಲಿ ಶೇ. ೨೦.೫೬ರಷ್ಟಾದರೆ ಅಲ್ಲಿನ ಗ್ರಾಮೀಣ ಪರಿಶಿಷ್ಟ ಪಂಗಡ ಮಹಿಳೆಯರ ಸಾಕ್ಷರತಾ ಪ್ರಮಾಣ ೨೦೦೧ರಲ್ಲಿ ಶೇ. ೧೫.೭೩. ಈ ಎಲ್ಲ ಸಂಗತಿಗಳು ತೀವ್ರ ನೀತಿ-ನಿರ್ದೇಶನ ಹೊಳಹುಗಳನ್ನು ಹೊಂದಿವೆ.

## ಭಾಗ-೬

## ಮಹಿಳೆಯರ ಸಾಕ್ಷರತೆ : ಪ್ರಾದೇಶಿಕ ನೆಲೆಗಳು

ಜೀನ್ ಡ್ರೀಜ್ ಮತ್ತು ಅಮರ್ತ್ಯಸೇನ್ ರಚಿಸಿರುವ ಭಾರತ ಕುರಿತ ಪ್ರಸಿದ್ಧ ಕೃತಿಯಲ್ಲಿ (೨೦೦೨) ತೋರಿಸಿರುವಂತೆ ಆರ್ಥಿಕವಾಗಿ ಹಿಂದುಳಿದಿರುವ ಪ್ರದೇಶಗಳಲ್ಲಿ ಲಿಂಗ ಅಸಮಾನತೆಯು ಆರ್ಥಿಕವಾಗಿ ಮುಂದುವರಿದ ಪ್ರದೇಶಗಳಲ್ಲಿರುವುದಕ್ಕಿಂತ ಅಧಿಕವಾಗಿರುತ್ತದೆ. ಇದಕ್ಕೆ ಅವರು ನೀಡುವ ಉದಾಹರಣೆಗಳೆಂದರೆ ಭಾರತದ 'ಬಿಮಾರು' ರಾಜ್ಯಗಳೆಂದು ಹೆಸರು ಪಡೆದಿರುವ ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಉತ್ತರ ಪ್ರದೇಶ. ಈ ನಾಲ್ಕು ರಾಜ್ಯಗಳ ಮಹಿಳಾ ಜನಸಂಖ್ಯೆಯು ದೇಶದ ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ಶೇ. ೩೫.೧೭ರಷ್ಟಿದ್ದರೆ ದೇಶದ ಒಟ್ಟು ಮಹಿಳಾ ಸಾಕ್ಷರರಲ್ಲಿ ಬಿಮಾರು ರಾಜ್ಯಗಳ ಮಹಿಳಾ ಸಾಕ್ಷರರ ಪ್ರಮಾಣ ಶೇ. ೨೬.೪೬ರಷ್ಟಿದೆ ಮತ್ತು ದೇಶದ ಒಟ್ಟು ಮಹಿಳಾ ಅನಕ್ಷರಸ್ಥರಲ್ಲಿ ಬಿಮಾರು ರಾಜ್ಯಗಳ ಮಹಿಳಾ ಅನಕ್ಷರಸ್ಥರ ಪ್ರಮಾಣ ಶೇ. ೪೨.೩೮ರಷ್ಟಿದೆ. ಆದರೆ ದಕ್ಷಿಣ ಭಾರತದ ನಾಲ್ಕು ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು, ಕೇರಳ ಮತ್ತು ಕರ್ನಾಟಕಗಳ ಚಿತ್ರ ಬಿಮಾರು ರಾಜ್ಯಗಳಿಗೆ ಹೋಲಿಸಿದರೆ  ಸಂಪೂರ್ಣವಾಗಿ ಭಿನ್ನವಾಗಿದೆ. ಈ ನಾಲ್ಕು ರಾಜ್ಯಗಳಲ್ಲಿನ ಮಹಿಳಾ ಜನಸಂಖ್ಯೆಯು ದೇಶದ ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ಶೇ. ೨೨.೨೩ರಷ್ಟಿದೆ. ಆದರೆ ದೇಶದ ಮಹಿಳಾ ಅಕ್ಷರಸ್ಥರಲ್ಲಿ ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ಮಹಿಳಾ ಅಕ್ಷರಸ್ಥರ ಪ್ರಮಾಣ ಶೇ. ೨೬.೫೬. ದೇಶದ ಒಟ್ಟು ಅನಕ್ಷರಸ್ಥ ಮಹಿಳೆಯರಲ್ಲಿ ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ಮಹಿಳಾ ಅನಕ್ಷರಸ್ಥರ ಪಾಲು ಕೇವಲ ಶೇ. ೧೯.೨೨. ಸುಮಾರು ರಾಜ್ಯಗಳಲ್ಲಿ ಅಕ್ಷರಸ್ಥ ಮಹಿಳೆಯರ ಸಂಖ್ಯೆಗಿಂತ (೫೯,೯೯೧,೪೯೪) ಅನಕ್ಷರಸ್ಥ ಮಹಿಳೆಯರ ಸಂಖ್ಯೆಯು (೮೧,೮೨೨,೪೧೮) ಅಧಿಕವಾಗಿದ್ದರೆ ದಕ್ಷಿಣ

ಭಾರತದ ನಾಲ್ಕು ರಾಜ್ಯಗಳಲ್ಲಿ ಅಕ್ಷರಸ್ಥ ಮಹಿಳೆಯರ ಸಂಖ್ಯೆಯು (೬೦.೨೭೦.೫೯೨) ಅನಕ್ಷರಸ್ಥ ಮಹಿಳೆಯರ ಸಂಖ್ಯೆಗಿಂತ (೩೭.೮೯೪.೩೩೪) ಅಧಿಕವಿದೆ. ಸಾಕ್ಷರತೆಗೆ ಸಂಬಂಧಿಸಿದ ಪ್ರಾದೇಶಿಕ ಆಯಾಮಗಳನ್ನು ಅಗತ್ಯವಾಗಿ ಪರಿಗಣಿಸಬೇಕಾಗುತ್ತದೆ. ಅಲ್ಲದಿದ್ದರೆ ಅನಕ್ಷರತೆಯನ್ನು ಹೋಗಲಾಡಿಸುವುದು ಸಾಧ್ಯ ವಾಗುವುದಿಲ್ಲ. ಕರ್ನಾಟಕವಲ್ಲೂ ಸಾಕ್ಷರತೆಗೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳಿವೆ. ಆದರೆ ಸಾಕ್ಷರತೆಗೆ ಸಂಬಂಧಿಸಿದ ಎಲ್ಲ ಬಗೆಯ ಅಸಮಾನತೆಗಳನ್ನು ಸರ್ಕಾರ ಮತ್ತು ಜನಪ್ರತಿನಿಧಿಗಳು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಕೋಷ್ಟಕ-೧೦ರಲ್ಲಿ ಕರ್ನಾಟಕ ದಲ್ಲಿನ ಸಾಕ್ಷರತೆಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯ ಸ್ವರೂಪವನ್ನು ತೋರಿಸಲಾಗಿದೆ.

### ಕರ್ನಾಟಕದ ಮಹಿಳಾ ಸಾಕ್ಷರತೆಯ ಪ್ರಾದೇಶಿಕ ಸ್ವರೂಪ-೨೦೦೧

**ಕೋಷ್ಟಕ-೧೦**

| ಕ್ರಸಂ. | ವಿವರಗಳು | ರಾಜ್ಯದ ಹಿಂದುಳಿದ ಏಳು ಜಿಲ್ಲೆಗಳು (ಲಕ್ಷಗಳಲ್ಲಿ) | ಕರ್ನಾಟಕ ರಾಜ್ಯ (ಲಕ್ಷಗಳಲ್ಲಿ) |
|---|---|---|---|
| ೧. | ಒಟ್ಟು ಮಹಿಳಾ ಜನಸಂಖ್ಯೆ | ೬೩.೮೬ | ೨೫೯.೫೨ |
| ೨. | ಒಟ್ಟು ಮಹಿಳಾ ಜನಸಂಖ್ಯೆ (ಏಳು ವರ್ಷಕ್ಕೆ ಮೇಲ್ಪಟ್ಟು) | ೫೩.೪೭ | ೨೨೪.೬೧ |
| ೩. | ಒಟ್ಟು ಮಹಿಳಾ ಅಕ್ಷರಸ್ಥರು | ೨೨.೬೪ | ೧೨೭.೭೪ |
| ೪. | ಒಟ್ಟು ಮಹಿಳಾ ಅನಕ್ಷರಸ್ಥರು | ೩೦.೮೩ | ೯೬.೮೭ |
| ೫. | ಒಟ್ಟು ಮಹಿಳಾ ಸಾಕ್ಷರತೆ ಪ್ರಮಾಣ (ಶೇ.) | ೪೨.೩೩ | ೫೬.೮೭ |

ಮೂಲ : ಸೆನ್ಸಸ್ ಆಫ್ ಇಂಡಿಯಾ : ೨೦೦೧. ಕರ್ನಾಟಕ ಸಿರೀಸ್-೩೦ ಪ್ರೈಮರಿ ಸೆನ್ಸಸ್ ಅಬ್‌ಸ್ಟ್ರಾಕ್ಟ್ ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್ಸ್, ಕರ್ನಾಟಕ.

ಡಾ. ಡಿ.ಎಂ. ನಂಜುಂಡಪ್ಪ ಸಮಿತಿ (೨೦೦೨) ಮತ್ತು ಕರ್ನಾಟಕ ಮಾನವ ಅಭಿವೃದ್ಧಿ ವರದಿಗಳಲ್ಲಿ (೧೯೯೯. ೨೦೦೬) ದೃಢಪಟ್ಟಿರುವಂತೆ ನಮ್ಮ ರಾಜ್ಯದಲ್ಲಿ ಅತ್ಯಂತ ಹಿಂದುಳಿದಿರುವ ಜಿಲ್ಲೆಗಳೆಂದರೆ ಬಾಗಲಕೋಟೆ, ವಿಜಾಪುರ, ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ. ಈ ಏಳು ಜಿಲ್ಲೆಗಳಲ್ಲಿ ಮಹಿಳೆಯರ ಸ್ಥಿತಿಗತಿಗಳು ರಾಜ್ಯಮಟ್ಟದಲ್ಲಿರುವ ಮಹಿಳೆಯರ ಸ್ಥಿತಿಗತಿಗಳಿಗಿಂತ ಅತ್ಯಂತ ಕೆಳಮಟ್ಟದಲ್ಲಿರುವುದು ಅಧ್ಯಯನಗಳಿಂದ ತಿಳಿಯುತ್ತದೆ. ರಾಜ್ಯದ ಒಟ್ಟು ಮಹಿಳೆಯರ ಜನಸಂಖ್ಯೆಯಲ್ಲಿ ಹಿಂದುಳಿದ ಏಳು ಜಿಲ್ಲೆಗಳ ಮಹಿಳಾ ಜನಸಂಖ್ಯೆಯ ಪ್ರಮಾಣ ಶೇ.೨೪.೬೧.

### ಸಾಮಾಜಿಕ ಗುಂಪುವಾರು ಸಾಕ್ಷರತಾ ಪ್ರಮಾಣ:
### ಪ್ರಾದೇಶಿಕ ಸ್ವರೂಪ: ೨೦೦೧
### ಕೋಷ್ಟಕ-೧೧

| ಕ್ರಸಂ. | ವಿವರಗಳು | ರಾಜ್ಯದ ಏಳು ಹಿಂದುಳಿದ ಜಿಲ್ಲೆಗಳು | ಕರ್ನಾಟಕ ರಾಜ್ಯ |
|---|---|---|---|
| ೧. | ಒಟ್ಟು ದಲಿತ ಮಹಿಳಾ ಜನಸಂಖ್ಯೆ | ೧.೮೪೨.೭೧೮ | ೫,೯೩೧,೯೩೩ |
| ೨. | ಒಟ್ಟು ದಲಿತ ಮಹಿಳಾ ಜನಸಂಖ್ಯೆ (ಏಳು ವರ್ಷಕ್ಕೆ ಮೇಲ್ಪಟ್ಟು) | ೧,೫೦೭.೬೧೮ | ೫.೦೨೭,೯೫೮ |
| ೩. | ಒಟ್ಟು ದಲಿತ ಅಕ್ಷರಸ್ಥ ಮಹಿಳೆಯರು | ೪೨೫,೯೧೩ | ೨.೦೨೩.೪೩೯ |
| ೪. | ಒಟ್ಟು ದಲಿತ ಅನಕ್ಷರಸ್ಥ ಮಹಿಳೆಯರು | ೧.೦೮೧.೭೦೫ | ೩,೦೦೪,೫೧೯ |
| ೫. | ಒಟ್ಟು ಮಹಿಳಾ ಸಾಕ್ಷರತಾ ಪ್ರಮಾಣ (ದಲಿತ) | ಶೇ. ೨೮.೨೫ | ಶೇ. ೪೦.೨೪ |
| ೬. | ಒಟ್ಟು ಮಹಿಳಾ ಸಾಕ್ಷರತಾ ಪ್ರಮಾಣ (ದಲಿತ+ದಲಿತೇತರ) | ಶೇ. ೪೨.೩೪ | ಶೇ. ೫೬.೮೭ |
| ೭. | ಒಟ್ಟು ಮಹಿಳಾ ಸಾಕ್ಷರತಾ ಪ್ರಮಾಣ (ದಲಿತೇತರ) | ಶೇ. ೪೭.೮೨ | ಶೇ. ೬೧.೬೭ |

ಮೂಲ : ಸೆನ್ಸ್ಸ್ ಆಫ್ ಇಂಡಿಯಾ : ೨೦೦೧. ಕರ್ನಾಟಕ-ಸಿರೀಸ್-೩೦ ಪ್ರೈಮರಿ ಸೆನ್ಸ್ಸ್ ಅಬ್‌ಸ್ಟ್ರಾಕ್ಟ್, ಡೈರೆಕ್ಟರೇಟ್ ಆಫ್ ಸೆನ್ಸ್ಸ್ ಆಪರೇಶನ್ಸ್,

ಆದರೆ ಈ ಜಿಲ್ಲೆಗಳ ಅಕ್ಷರಸ್ಥ ಮಹಿಳೆಯರ ಪ್ರಮಾಣ ಮಾತ್ರ ಕೇವಲ ಶೇ. ೧೭.೭೨. ಇದಕ್ಕೆ ಪ್ರತಿಯಾಗಿ ರಾಜ್ಯದ ಒಟ್ಟು ಅನಕ್ಷರಸ್ಥರಲ್ಲಿ ಹಿಂದುಳಿದ ಏಳು ಜಿಲ್ಲೆಗಳ ಅನಕ್ಷರಸ್ಥ ಮಹಿಳೆಯರ ಪ್ರಮಾಣ ಶೇ. ೩೧.೮೩. ಈ ಜಿಲ್ಲೆಗಳ ಮಹಿಳಾ ಸಾಕ್ಷರತೆಯ ಪ್ರಮಾಣವು ರಾಜ್ಯದ ಮಹಿಳಾ ಸಾಕ್ಷರತಾ ಪ್ರಮಾಣದ ಶೇ. ೭೪.೪೩ರಷ್ಟಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವ ಸಂಗತಿಯೆಂದರೆ ರಾಜ್ಯದಲ್ಲಿ ಅಕ್ಷರಸ್ಥ ಮಹಿಳೆಯರ ಸಂಖ್ಯೆಯು ಅನಕ್ಷರಸ್ಥ ಮಹಿಳೆಯರ ಸಂಖ್ಯೆಗಿಂತ ಅಧಿಕವಾಗಿದ್ದರೆ

ರಾಜ್ಯದ ಏಳು ಹಿಂದುಳಿದ ಜಿಲ್ಲೆಗಳಲ್ಲಿ ಅಕ್ಷರಸ್ಥ ಮಹಿಳೆಯರ ಸಂಖ್ಯೆಯು ಅನಕ್ಷರಸ್ಥ ಮಹಿಳೆಯರ ಸಂಖ್ಯೆಗಿಂತ ಕಡಿಮೆಯಿದೆ.

**ಕರ್ನಾಟಕದಲ್ಲಿ ದಲಿತ ಮಹಿಳೆಯರ ಸಾಕ್ಷರತೆಯ ಪ್ರಾದೇಶಿಕ ಸ್ವರೂಪ**

ಕರ್ನಾಟಕದಲ್ಲಿನ ಮಹಿಳೆಯರ ಸಾಕ್ಷರತೆಗೆ ಸಂಬಂಧಿಸಿದ ಪ್ರಾದೇಶಿಕ ನೆಲೆಗಳ ಜಾತಿ ಸ್ವರೂಪವನ್ನು ಕೋಷ್ಟಕ-೧೦ ಮತ್ತು ೧೧ರಲ್ಲಿ ತೋರಿಸಲಾಗಿದೆ.

ಈ ಕೋಷ್ಟಕ-೧೦ ಮತ್ತು ೧೧ರಲ್ಲಿರುವ ಅಂಕಿಅಂಶಗಳು ತೋರಿಸುತ್ತಿರುವಂತೆ ರಾಜ್ಯಮಟ್ಟದಲ್ಲಿನ ಮಹಿಳಾ ಸಾಕ್ಷರತೆ ಮತ್ತು ಹಿಂದುಳಿದ ಜಿಲ್ಲೆಗಳಲ್ಲಿನ ಮಹಿಳಾ ಸಾಕ್ಷರತೆ ನಡುವೆ ತೀವ್ರ ಅಂತರವಿದೆ. ಅದೇ ರೀತಿಯಲ್ಲಿ ಹಿಂದುಳಿದ ಪ್ರದೇಶದೊಳಗೆ ದಲಿತ ಮಹಿಳೆಯರು ಮತ್ತು ದಲಿತೇತರ ಮಹಿಳೆಯರ ನಡುವೆಯೂ ಸಾಕ್ಷರತೆಗೆ ಸಂಬಂಧಿಸಿದಂತೆ ಅಂತರವಿದೆ. ರಾಜ್ಯದ ಏಳು ಹಿಂದುಳಿದ ಜಿಲ್ಲೆಗಳಲ್ಲಿ ದಲಿತ ಮಹಿಳೆಯರ ಸಾಕ್ಷರತೆ ೨೦೦೧ರಲ್ಲಿ ಕೇವಲ ಶೇ. ೨೮.೨೫. ರಾಜ್ಯಮಟ್ಟದಲ್ಲಿ ಇದು ಶೇ. ೪೦.೨೪ರಷ್ಟಿದೆ. ಈ ಎಲ್ಲ ಚರ್ಚೆಯ ತಥ್ಯವೆಂದರೆ ಸಾಕ್ಷರತೆಗೆ ಸಂಬಂಧಿಸಿದಂತೆ ಅತ್ಯಂತ ದುಸ್ಥಿತಿಯಲ್ಲಿರುವ ವರ್ಗವೆಂದರೆ ದಲಿತ ಮಹಿಳೆಯರು. ಅದರಲ್ಲೂ ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿನ ದಲಿತ ಮಹಿಳೆಯರ ಸಾಕ್ಷರತೆ ಪ್ರಮಾಣವು ಅತ್ಯಂತ ಕೆಳಮಟ್ಟದಲ್ಲಿದೆ. ಅದನ್ನು ಅಖಂಡವಾದಿ-ವಿಶ್ವಾತ್ಮಕ ನೀತಿಗಳಿಂದ ಪರಿಹರಿಸಲು ಸಾಧ್ಯವಿಲ್ಲ. ಅದಕ್ಕೆ ಪ್ರದೇಶ-ನಿರ್ದಿಷ್ಟ ಮತ್ತು ಜಾತಿ-ನಿರ್ದಿಷ್ಟ ನೀತಿಗಳ ಅಗತ್ಯವಿದೆ.

## ಭಾಗ-೭

## ಮಹಿಳೆಯರ ಸಾಕ್ಷರತೆ ಮತ್ತು ಸಂತಾನೋತ್ಪತ್ತಿ ಹೊಣೆಗಾರಿಕೆ.

ಮಹಿಳೆಯರ ಸಾಕ್ಷರತೆಯು ಪುರುಷರ ಸಾಕ್ಷರತೆಗಿಂತ ಕೆಳಮಟ್ಟದಲ್ಲಿರಲು ಬಹು ಮುಖ್ಯವಾದ ಕಾರಣವೆಂದರೆ ಅವರನ್ನು ಕೇವಲ ಸಂತಾನೋತ್ಪತ್ತಿ ಜವಾಬುದಾರಿಯನ್ನು ನಿರ್ವಹಿಸುವವರೆಂದು ಪರಿಭಾವಿಸಿ ಕೊಂಡಿರುವುದರಲ್ಲಿದೆ. ಇಂದು ಕರ್ನಾಟಕದಲ್ಲಿ ಬಾಲ್ಯ ವಿವಾಹಗಳು ತೀವ್ರವಾಗಿ ಕಡಿಮೆಯಾಗುತ್ತಿವೆ ವಿನಾ ಸಂಪೂರ್ಣವಾಗಿ ನಿರ್ಮೂಲನವಾಗಿಲ್ಲ. ನಮ್ಮ ರಾಜ್ಯದಲ್ಲಿ ಮಹಿಳೆಯರ ಶಾಸನಾತ್ಮಕ ಮದುವೆಯ ವಯಸ್ಸು ಹದಿನೆಂಟು ವರ್ಷಗಳು. ಆದರೆ ನಮ್ಮಲ್ಲಿ ಹದಿನೆಂಟು ವಯಸ್ಸು ತುಂಬು ವುದಕ್ಕಿಂತ ಮೊದಲೇ ಮದುವೆಯಾಗುವ ಮಹಿಳೆಯರ ಪ್ರಮಾಣ ಅಗಾಧವಾಗಿದೆ ಮತ್ತು ಇದರಿಂದಾಗಿ ೧೫-೧೯ ವಯೋಮಾನದಲ್ಲಿ ತಾಯಂದಿರಾಗುವ ಮಹಿಳೆಯರ ಪ್ರಮಾಣವೂ ಅಧಿಕವಾಗಿದೆ. ಇದನ್ನು ಕೋಷ್ಟಕ ೧೨ ರಲ್ಲಿ ಕರ್ನಾಟಕದ ಜಿಲ್ಲೆಗಳಿಗೆ ಸಂಬಂಧಿಸಿದಂತೆ ನೀಡಲಾಗಿದೆ.

## ಕರ್ನಾಟಕದಲ್ಲಿ ಮಹಿಳೆಯರ ಮದುವೆ ವಯಸ್ಸು ಮತ್ತು ಹರೆಯದಲ್ಲಿ ತಾಯಂದಿರಾಗುವ ಮಹಿಳೆಯರು:೨೦೦೭-೨೦೦೮.

### ಕೋಷ್ಟಕ-೧೨.

| ಕ್ರ.ಸಂ. | ಜಿಲ್ಲೆಗಳು | ವಾರ್ಷಿಕ ಒಟ್ಟು ಜನನಗಳಲ್ಲಿ ೧೫-೧೯ ವಯೋಮಾನದಲ್ಲಿನ ಜನನಗಳ ಪ್ರಮಾಣ. | ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿಗೆ ಮದುವೆಯಾದ ಮಹಿಳೆಯರ ಪ್ರಮಾಣ |
|---|---|---|---|
| ೧. | ಬಾಗಲಕೋಟೆ | ೨೬.೫೦ | ೪೭.೫೦ |
| ೨. | ಬೆಂಗಳೂರು(ಗ್ರಾ) | ೧೮.೦೦ | ೧೪.೮೦ |
| ೩. | ಬೆಂಗಳೂರು(ನ) | ೧೦.೯೦ | ೧೦.೧೦ |
| ೪. | ಬೆಳಗಾವಿ | ೧೭.೩೦ | ೪೪.೨೦ |
| ೫. | ಬಳ್ಳಾರಿ | ೨೪.೩೦ | ೩೬.೩೦ |
| ೬. | ಬೀದರ್ | ೨೫.೯೦ | ೨೭.೪೦ |
| ೭. | ಬಿಜಾಪುರ | ೩೦.೩೦ | ೪೩.೧೦ |
| ೮. | ಚಾಮರಾಜನಗರ | ೨೫.೦೦ | ೨೪.೪೦ |
| ೯. | ಚಿಕ್ಕಮಗಳೂರು | ೯.೮೦ | ೩.೫೦ |
| ೧೦. | ಚಿತ್ರದುರ್ಗ | ೨೪.೩೦ | ೨೭.೬೦ |
| ೧೧. | ದಕ್ಷಿಣಕನ್ನಡ | ೭.೦೦ | ೫.೭೦ |
| ೧೨. | ದಾವಣಗೆರೆ | – | – |
| ೧೩. | ಧಾರವಾಡ | ೧೯.೫೦ | ೨೧.೩೦ |
| ೧೪. | ಗದಗ | ೨೩.೫೦ | ೩೨.೪೦ |
| ೧೫. | ಗುಲಬರ್ಗಾ | ೩೨.೨೦ | ೪೧.೬೦ |
| ೧೬ | ಹಾಸನ | ೧೬.೪೦ | ೩.೨೦ |
| ೧೭ | ಹಾವೇರಿ | ೨೨.೬೦ | ೧೯.೭೦ |
| ೧೮. | ಕೊಡಗು | ೧೧.೩೦ | ೭.೧೦ |
| ೧೯. | ಕೋಲಾರ | ೧೮.೮೦ | ೧೮.೪೦ |
| ೨೦. | ಕೊಪ್ಪಳ | ೩೧.೭೦ | ೪೪.೭೦ |
| ೨೧. | ಮಂಡ್ಯ | ೨೦.೮೦ | ೨೧.೭೦ |
| ೨೨. | ಮೈಸೂರು | ೨೦.೩೦ | ೧೪.೩೦ |
| ೨೩. | ರಾಯಚೂರು | ೩೦.೬೦ | ೩೮.೭೦ |
| ೨೪. | ಶಿವಮೊಗ್ಗ | ೧೪.೭೦ | ೮.೯೦ |
| ೨೫. | ತುಮಕೂರು | ೧೮.೫೦ | ೧೮.೪೦ |
| ೨೬ | ಉಡುಪಿ | ೩.೨೦ | ೨.೭೦ |
| ೨೭ | ಉತ್ತರ ಕನ್ನಡ | ೮.೫೦ | ೧.೬೦ |
| | ರಾಜ್ಯ ಕರ್ನಾಟಕ | ೧೭.೩೬ | ೨೪.೯೦ |



COMMUNITY HEALTH CELL LIBRARY and Information Centre
EDU-100 P10-12635

ಮೂಲ : ಜಿಲ್ಲಾ ಮಟ್ಟದ ಕುಟುಂಬ ಘಟಕಗಳ ಸಮೀಕ್ಷೆ: 2007-2008. (ಮೂರನೆಯ ಸುತ್ತು).

**ಟಿಪ್ಪಣಿ:** ಡಿಎಲ್‌ಎಚ್‌ಎಸ್‌ನ ೨೦೦೭-೦೮ನೆಯ(ಮೂರನೆಯ) ಸುತ್ತಿನಲ್ಲಿ ಕರ್ನಾಟಕ ರಾಜ್ಯದ ವಿವರಗಳಲ್ಲಿ ದಾವಣಗೆರೆ ಜಿಲ್ಲೆ ಕೈಬಿಟ್ಟು ಹೋಗಿದೆ. ಅಲ್ಲಿ ೨೬ ಜಿಲ್ಲೆಗಳ ಮಾಹಿತಿ ಮಾತ್ರ ದೊರೆಯುತ್ತದೆ.

ಕರ್ನಾಟಕದ ಹಿಂದುಳಿದ ಜಿಲ್ಲೆಗಳಲ್ಲಿ ೧೮ ವರ್ಷಕ್ಕೆ ಮೊದಲೇ ಮದುವೆಯಾಗುವ ಮಹಿಳೆಯರ ಪ್ರಮಾಣ ಸರಾಸರಿ ಶೇ.೩೫ಕ್ಕಿಂತ ಅಧಿಕವಿದೆ. ಇದು ಬಾಗಲಕೋಟೆಯಲ್ಲಿ ಶೇ೪೭ರಷ್ಟಿದ್ದರೆ ವಿಜಾಪುರ, ಬೆಳಗಾವಿ, ಗುಲಬರ್ಗಾ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಅದು ಶೇ೪೦ಕ್ಕಿಂತ ಅಧಿಕವಾಗಿದೆ. ಅದೇ ರೀತಿಯಲ್ಲಿ ಒಟ್ಟು ಹುಟ್ಟುವ ಮಕ್ಕಳಲ್ಲಿ ೧೫-೧೯ ವಯೋಮಾನದ ತಾಯಂದಿರಿಗೆ ಹುಟ್ಟುವ ಮಕ್ಕಳ ಪ್ರಮಾಣ ರಾಜ್ಯದ ಹಿಂದುಳಿದ ಕೆಲವು ಜಿಲ್ಲೆಗಳಲ್ಲಿ ಶೇ೩೫ಕ್ಕಿಂತ ಅಧಿಕವಾಗಿದೆ. ಮಹಿಳೆಯರ ಸಾಕ್ಷರತಾ ಪ್ರಮಾಣ ಕಡಿಮೆಯಿರಲು ಇವೆರಡು ಪ್ರಮುಖ ಕಾರಣಗಳಾಗಿವೆ. ಈ ಸಂಗತಿಯ ಹಿನ್ನೆಲೆಯಲ್ಲಿ ಮಹಿಳೆಯರ ಸಾಕ್ಷರತೆಯnನ್ನು ಮತ್ತು ಲಿಂಗಸಂಬಂಧಿ ಅಸಮಾನತೆಯ ಪ್ರಶ್ನೆಯನ್ನು ಪರಿಗಣಿಸಬೇಕಾಗುತ್ತದೆ. ಲಿಂಗಸಂಬಂಧಿ ಸಾಕ್ಷರತಾ ಅಂತರವನ್ನು ನಿವಾರಿಸುವುದು ಸರಳವಾದ ಸಂಗತಿಯಲ್ಲ. ಅದು ದೇಶ/ಪ್ರದೇಶವೊಂದು ಯಾವ ಬಗೆಯ ಅಭಿವೃದ್ಧಿಯನ್ನು ಸಾಧಿಸಿಕೊಂಡಿದೆ ಎಂಬುದನ್ನು ಅವಲಂಬಿಸಿದೆ. ಎಲ್ಲಿ ಅಭಿವೃದ್ಧಿ ವಿನ್ಯಾಸವು ವರಮಾನ ಕೇಂದ್ರಿತವಾಗಿರುತ್ತದೋ ಅಲ್ಲಿ ಅಭಿವೃದ್ಧಿಯು ಉನ್ನತ ಮಟ್ಟಕ್ಕೇರಿದಂತೆ ಲಿಂಗಸಂಬಂಧಿ ಅಸಮಾನತೆಯೇನು ಕಡಿಮೆಯಾಗುವುದಿಲ್ಲ. ಎಲ್ಲಿ ಅಭಿವೃದ್ಧಿಯು ಧಾರಣಾ ಸಾಮರ್ಥ್ಯವನ್ನು ವರ್ಧಿಸುವ ವಿನ್ಯಾಸದಲ್ಲಿರುತ್ತದೋ ಅಲ್ಲಿ ಅಭಿವೃದ್ಧಿಯು ಉನ್ನತ ಮಟ್ಟಕ್ಕೇರಿದಂತೆ ಲಿಂಗ ಅಸಮಾನತೆ ಮತ್ತು ಲಿಂಗ ಸಂಬಂಧಿ ಸಾಕ್ಷರತಾ ಅಸಮಾನತೆಯು ಕಡಿಮೆಯಾಗುತ್ತದೆ. ಈ ಸಂಕೀರ್ಣ ಸಂಗತಿಗೆ ಉದಾಹರಣೆಯೆಂದರೆ ಕರ್ನಾಟಕದ ಶಿವಮೊಗ್ಗ ಮತ್ತು ಬಳ್ಳಾರಿ ಜಿಲ್ಲೆಗಳ ಅಭಿವೃದ್ಧಿ ವಿನ್ಯಾಸಗಳು. ಇದನ್ನು ಕೆಳಗಿನ ಕೋಷ್ಟಕ-೧೩ರಲ್ಲಿ ತೋರಿಸಿದೆ; ಶಿವಮೊಗ್ಗ ಜಿಲ್ಲೆಯ ಅಭಿವೃದ್ಧಿಯು ಧಾರಣಾ ಸಾಮರ್ಥ್ಯ ವರ್ಧನಾ ಮಾದರಿಯಲ್ಲಿದ್ದರೆ ಬಳ್ಳಾರಿ ಜಿಲ್ಲೆಯ ಅಭಿವೃದ್ಧಿಯು ವರಮಾನ ಕೇಂದ್ರಿತ ವಿನ್ಯಾಸದಲ್ಲಿದೆ. ವರಮಾನದಲ್ಲಿ ಬಳ್ಳಾರಿ ಜಿಲ್ಲೆಯು ಶಿವಮೊಗ್ಗಕ್ಕೆ ಸಾಪೇಕ್ಷವಾಗಿ ಅತ್ಯಂತ ಮುಂದುವರಿದ ಜಿಲ್ಲೆಯಾಗಿದೆ. ಅದರ ತಲಾ ವರಮಾನವು ಶಿವಮೊಗ್ಗ ಜಿಲ್ಲೆಯ ತಲಾ ವರಮಾನದ ಶೇ. ೧೩೭.೫೫ರಷ್ಟಿದೆ. ಶಿವಮೊಗ್ಗ ಜಿಲ್ಲೆಯ ತಲಾ ವರಮಾನವು ಬಳ್ಳಾರಿ ಜಿಲ್ಲೆಯ ತಲಾ ವರಮಾನದ ಶೇ. ೭೨.೭೦ರಷ್ಟಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಶಿವಮೊಗ್ಗಕ್ಕೆ ಹೋಲಿಸಿದರೆ ಬಳ್ಳಾರಿ ಜಿಲ್ಲೆಯು ಶ್ರೀಮಂತ ಜಿಲ್ಲೆಯಾಗಿದೆ. ಬಳ್ಳಾರಿ ಜಿಲ್ಲೆಗೆ ಹೋಲಿಸಿದರೆ ಶಿವಮೊಗ್ಗವು ಬಡ ಜಿಲ್ಲೆಯಾಗಿದೆ.

## ೩.೨ ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗಸಂಬಂಧಿ ಸ್ವರೂಪ

## ಶಿವಮೊಗ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮಹಿಳೆಯರ ಸ್ಥಿತಿಗತಿಯ ತುಲನಾತ್ಮಕ ಚಿತ್ರ

**ಕೋಷ್ಟಕ-೧೩**

| ಕ್ರಸಂ. | ಸೂಚಿಗಳು | ಶಿವಮೊಗ್ಗ | ಬಳ್ಳಾರಿ |
|---|---|---|---|
| ೧ | ಒಟ್ಟು ಜಿಲ್ಲಾ ಆಂತರಿಕ ತಲಾ ಉತ್ಪನ್ನ (ಚಾಲ್ತಿ ಬೆಲೆಗಳಲ್ಲಿ):೨೦೦೭-೨೦೦೮. | ರೂ ೩೪೬೧೧ | ರೂ ೪೭೬೦೭ |
| ೨ | ಮಹಿಳೆಯರ ಸಾಕ್ಷರತಾ ಪ್ರಮಾಣ (೨೦೦೧) | ಶೇ ೬೬.೮೮ | ಶೇ ೪೫.೨೮ |
| ೩ | ಮಹಿಳೆಯರು ಮತ್ತು ಪುರುಷರ ಸಾಕ್ಷರತೆ ಸಪುವಿನ ಅಂತರ(೨೦೦೧). (ಶೇಕಡಾಂಶಗಳು) | ಶೇ ೧೫.೧೩ | ಶೇ ೨೩.೯೨ |
| ೪ | ಹದಿನೆಂಟು ವರ್ಷಕ್ಕೆ ಮೊದಲೇ ಮದುವೆಯಾಗುವ ಮಹಿಳೆಯರ ಪ್ರಮಾಣ(೨೦೦೭-೦೮) | ಶೇ ೮.೯೦ | ಶೇ ೩೬.೩೦ |
| ೫ | ಜನಸಂಖ್ಯಾ ಬೆಳವಣಿಗೆ ಪ್ರಮಾಣ (ವಾರ್ಷಿಕ): ೧೯೯೧-೨೦೦೧ | ಶೇ ೧.೨೯ | ಶೇ ೨.೨೩ |

ಮೂಲ : ೧).ಕರ್ನಾಟಕ ಸರ್ಕಾರ.೨೦೧೦. ಆರ್ಥಿಕ ಸಮೀಕ್ಷೆ : ೨೦೦೯-೨೦೧೦.
೨).ಕರ್ನಾಟಕ ಸರ್ಕಾರ ೨೦೦೬. ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ ವರದಿ-೨೦೦೫.

ಆದರೆ ಬಳ್ಳಾರಿ ಜಿಲ್ಲೆಯು ವರಮಾನದಲ್ಲಿ ಶ್ರೀಮಂತವಾಗಿದ್ದರೂ ಅಲ್ಲಿನ ಮಹಿಳೆಯರ ಬದುಕು ಶ್ರೀಮಂತವಾಗಿಲ್ಲ(ಸಮೃದ್ಧವಾಗಿಲ್ಲ). ಇದಕ್ಕೆ ಪ್ರತಿಯಾಗಿ ಶಿವಮೊಗ್ಗ ಜಿಲ್ಲೆಯ ವರಮಾನವು ಬಳ್ಳಾರಿಗೆ ಹೋಲಿಸಿದರೆ ಕೆಳಮಟ್ಟದಲ್ಲಿದ್ದರೂ ಅಲ್ಲಿ ಮಹಿಳೆಯರ ಬದುಕು ಸಮೃದ್ಧವಾಗಿಲ್ಲದಿದ್ದರೂ ಉತ್ತಮವಾಗಿದೆ. ಆದ್ದರಿಂದ ಪ್ರದೇಶವೊಂದು ಅಭಿವೃದ್ಧಿಯನ್ನು ಸಾಧಿಸಿಕೊಂಡು ಬಿಟ್ಟರೆ ಅಲ್ಲಿ ತನ್ನಷ್ಟಕ್ಕೆ ತಾನೆ ಮಹಿಳೆಯರ ಬದುಕು ಉತ್ತಮವಾಗುವುದಿಲ್ಲ. ಎಲ್ಲಿ ಅಭಿವೃದ್ಧಿಯು ಲಿಂಗ ಸ್ಪಂದಿಯಾಗಿರುತ್ತದೋ, ಎಲ್ಲಿ ಅದು ಜನರ ಧಾರಣಾ ಸಾಮರ್ಥ್ಯವನ್ನು ವಿಸ್ತೃತಗೊಳಿಸುವ ರೀತಿಯಲ್ಲಿರುತ್ತದೋ ಅಲ್ಲಿ ಮಾತ್ರ ಅಭಿವೃದ್ಧಿಯು ಮಹಿಳೆಯರ ಬದುಕನ್ನು ಉತ್ತಮ ಪಡಿಸುವುದು ಸಾಧ್ಯ.

## ಸಾರಾಂಶ ಮತ್ತು ಅಧ್ಯಯನದ ತಥ್ಯಗಳು

ಈ ಅಧ್ಯಯನ ಪ್ರಬಂಧದಲ್ಲಿ ಬಹಳ ಮುಖ್ಯವಾಗಿ ಮಹಿಳೆಯರ ಸಾಕ್ಷರತೆಯನ್ನು ಮತ್ತು ಅವರ ಶಿಕ್ಷಣವನ್ನು ಸಾಂಪ್ರದಾಯಿಕವಾಗಿ ಹೇಗೆ ಪರಿಭಾವಿಸಿಕೊಳ್ಳಲಾಗಿದೆ ಮತ್ತು ಅದನ್ನು ಅಭಿವೃದ್ಧಿಯ ದೃಷ್ಟಿಯಿಂದ ಹೇಗೆ ಪರಿಭಾವಿಸಿಕೊಳ್ಳಬೇಕು ಎಂಬುದನ್ನು ವಿವರವಾಗಿ ಚರ್ಚಿಸಲಾಗಿದೆ.

ಸಾಕ್ಷರತೆಯನ್ನು, ಅದರಲ್ಲೂ ಮಹಿಳೆಯರ ಸಾಕ್ಷರತೆ ಮತ್ತು ಶಿಕ್ಷಣವನ್ನು ಅಭಿವೃದ್ಧಿಯ 'ಸಾಧನ'ವಾಗಿ ಮಾತ್ರ ಪರಿಭಾವಿಸಿಕೊಂಡು ಬರಲಾಗಿದೆ. ಮಹಿಳೆಯೊಬ್ಬಳಿಗೆ ಮಹಿಳೆಯಾಗಿ ಸಾಕ್ಷರತೆ ಮತ್ತು ಶಿಕ್ಷಣ ಅಗತ್ಯವೆಂಬ ಸಂಗತಿಯನ್ನು ಒಪ್ಪಿಕೊಳ್ಳಲು ಸಮಾಜ ಇಂದಿಗೂ ಸಿದ್ಧವಿಲ್ಲ. ಮೊದಲ ಬಗೆಯ ದೃಷ್ಟಿಕೋನವನ್ನು ಅಮರ್ತ್ಯಸೇನ್ 'ಉಪಕರಣ ವಾದಿ' ದೃಷ್ಟಿಕೋನವೆಂದು ಕರೆಯುತ್ತಾನೆ. ಅಮರ್ತ್ಯಸೇನ್, ಜೀನ್ ಡ್ರೀಜ್, ಮಾರ್ತನುಸ್‌ಬೌಮ್, ಮೆಹಬೂಬ್ ಉಲ್ ಹಕ್, ಇರನಿವಾನ್ ಸ್ಟೆವರೆನ್, ಡೆಸ್ ಗ್ಯಾಸ್ಪರ್, ಕರುಣಾ ಚನನ ಮುಂತಾದವರು ಸಾಕ್ಷರತೆಯನ್ನು ಮತ್ತು ಶಿಕ್ಷಣವನ್ನು ಅಭಿವೃದ್ಧಿಯ ಸಾಧನ ಹಾಗೂ ಸಾಧ್ಯವೆಂಬ ವಿಚಾರವನ್ನು ಪ್ರತಿಪಾದಿಸುತ್ತಿದ್ದಾರೆ. ಈ ಸಂಗತಿಯನ್ನು ಇಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಅಮರ್ತ್ಯಸೇನ್ ರೂಪಿಸಿರುವ ಧಾರಣಾ ಸಾಮರ್ಥ್ಯ ಆಧರಿತ ಅಭಿವೃದ್ಧಿ ಸಿದ್ಧಾಂತದ ಹಿನ್ನೆಲೆಯಲ್ಲಿ ಮಹಿಳೆಯರ ಸಾಕ್ಷರತೆ ಮತ್ತು ಅವರ ಶಿಕ್ಷಣಗಳ ಅಗತ್ಯವನ್ನು ವಿಶ್ಲೇಷಿಸಲಾಗಿದೆ. ಮಹಿಳೆಯು ಮಹಿಳೆಯಾಗಲು ಸಾಕ್ಷರತೆ ಮತ್ತು ಅವರ ಶಿಕ್ಷಣಗಳ ಅಗತ್ಯವನ್ನು ವಿಶ್ಲೇಷಿಸಲಾಗಿದೆ. ಅದು ಅವಳ ಬದುಕನ್ನು ಉತ್ತಮಪಡಿಸುವ ಸಾಧನವಾಗಿಯೂ ಮುಖ್ಯ ಮತ್ತು ಅದು ಒಂದು ದೃಷ್ಟಿಯಿಂದ ಅವಳ ಬದುಕೇ ಆಗಿದೆ ಎಂಬುದನ್ನು ಸಾಧಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಇಲ್ಲಿ ಮಹಿಳೆಯರ ಸಾಕ್ಷರತೆ ಕುರಿತ ಚರ್ಚೆಯನ್ನು ಕೇವಲ ವರ್ಗ ಮತ್ತು ಲಿಂಗದ ನೆಲೆಯಲ್ಲಿ ಮಾತ್ರ ನಡೆಸುವುದರ ಜೊತೆಗೆ ಅದನ್ನು ಜಾತಿಯ ನೆಲೆಯಲ್ಲೂ ನಡೆಸಲಾಗಿದೆ. ದಲಿತ ಮಹಿಳೆ ಮತ್ತು ದಲಿತ ಪುರುಷರ ನಡುವಿನ ಸಾಕ್ಷರತೆಗೆ ಸಂಬಂಧಿಸಿದ ಅಂತರವನ್ನು ವಿಶ್ಲೇಷಿಸುವುದರ ಜೊತೆಗೆ ದಲಿತ ಮಹಿಳೆ ಮತ್ತು ದಲಿತೇತರ ಮಹಿಳೆಯರ ನಡುವಿನ ಸಾಕ್ಷರತೆಗೆ ಸಂಬಂಧಿಸಿದ ಅಂತರಗಳನ್ನು ಇಲ್ಲಿ ವಿವರವಾಗಿ ಪರಿಶೀಲಿಸಲಾಗಿದೆ. ದಲಿತೇತರ ಮಹಿಳೆಯರ ದೃಷ್ಟಿಯಿಂದ ಅನಕ್ಷರತೆಯೆಂಬುದು ಅಸ್ವಾತಂತ್ರ್ಯವಾಗಿದೆ. ಆದರೆ ದಲಿತ ಮಹಿಳೆಯರ ದೃಷ್ಟಿಯಿಂದ ಅದು ಅಸ್ವಾತಂತ್ರ್ಯದ ಸಂಗತಿಯೂ ಹೌದು ಮತ್ತು ಅದು ಜಾತಿಯ ಪ್ರಶ್ನೆಯೂ ಆಗಿದೆ. ಈ ಸಂಗತಿಯನ್ನು ಇಲ್ಲಿ ಮುಖ್ಯ ಪ್ರಮೇಯವನ್ನಾಗಿ ಮಾಡಿಕೊಳ್ಳಲಾಗಿದೆ. ಮಹಿಳೆಯರ ಸಾಕ್ಷರತೆ ಮತ್ತು ಶಿಕ್ಷಣವನ್ನು ಲಿಂಗಸಂಬಂಧಿ ನೆಲೆಯಿಂದ ಹಾಗೂ ಜಾತಿ ಸಂಬಂಧಿ ನೆಲೆಯಿಂದಲೂ ಪರಿಭಾವಿಸಿಕೊಳ್ಳುವ ಅಗತ್ಯವನ್ನು ಇಲ್ಲಿ ತೋರಿಸಲಾಗಿದೆ.

ಸಾಕ್ಷರತೆಯ ದೃಷ್ಟಿಯಿಂದ ಅತ್ಯಂತ ದುಸ್ಥಿತಿಯಲ್ಲಿರುವ ವರ್ಗವೆಂದರೆ ದಲಿತ ಮಹಿಳೆಯರು ಎಂಬುದನ್ನು ನಿದರ್ಶನಾತ್ಮಕವಾಗಿ ಇಲ್ಲಿ ತೋರಿಸಲಾಗಿದೆ. ದಲಿತರ ಮತ್ತು ದಲಿತ ಮಹಿಳೆಯರ ಸ್ಥಿತಿಗತಿಯನ್ನು ಒಟ್ಟು ಜನಸಂಖ್ಯೆಗೆ ಸಂಬಂಧಿಸಿದಂತೆ ಪರಿಭಾವಿಸಿಕೊಳ್ಳುವುದಕ್ಕೆ ಪ್ರತಿಯಾಗಿ ದಲಿತರು ಮತ್ತು ದಲಿತೇತರರಿಗೆ ಸಂಬಂಧಿಸಿದಂತೆ ಪರಿಭಾವಿಸಿಕೊಳ್ಳುವ ಅಗತ್ಯವನ್ನು ಇಲ್ಲಿ ಎತ್ತಿ ತೋರಿಸಲಾಗಿದೆ.

### ನೀತಿ–ನಿರ್ದೇಶನ ಸಂಗತಿಗಳು

ನಮ್ಮದು ಮೂಲತಃ ಶ್ರೇಣೀಕೃತ ಸಮಾಜ. ಅಲ್ಲಿ ಅಭಿವೃದ್ಧಿ ಮತ್ತು ಅದರ ಸೂಚಿಗಳಾದ ಸಾಕ್ಷರತೆ, ಶಿಕ್ಷಣ, ಆರೋಗ್ಯ, ಘನತೆಯಿಂದ ಕೂಡಿದ ಬದುಕು ಮುಂತಾದವು ಶ್ರೇಣೀಕೃತವಾಗಿಯೇ ಸಂಭವಿಸುತ್ತವೆ. ನೀತಿ–ನಿರ್ದೇಶನ ಕಾರ್ಯದಲ್ಲಿ ತೊಡಗಿರುವವರು ಇಂತಹ ಸಂಗತಿಗಳ ಬಗ್ಗೆ ಜಾಗೃತರಾಗಿರಬೇಕು. ಲಿಂಗ ಸಂಬಂಧಿ ಸಾಕ್ಷರತಾ ಅಂತರದ ಮೂಲದಲ್ಲಿ ಅನೇಕ ಸಂಗತಿಗಳು ಕೆಲಸ ಮಾಡುತ್ತಿವೆ. ಪ್ರಸ್ತುತ ಅಧ್ಯಯನದಲ್ಲಿ ಕೆಳಕಂಡ ಮುಖ್ಯ ನೀತಿ–ನಿರ್ದೇಶನ ಸಂಗತಿಗಳನ್ನು ಗುರುತಿಸಲಾಗಿದೆ.

1. ಲಿಂಗಸಂಬಂಧಿ ಸಾಕ್ಷರತಾ ಅಂತರ–ಅಸಮಾನತೆಯು ಎರಡು ಮುಖಗಳನ್ನು ಹೊಂದಿದೆ. ಮೊದಲನೆಯದು ರೂಢಿಗತವಾದ ಪುರುಷರು ಮತ್ತು ಮಹಿಳೆಯರ ನಡುವಿನ ಸಾಕ್ಷರತಾ ಅಂತರ. ಇದರ ಬಗ್ಗೆ ಎಲ್ಲರೂ ಮಾತನಾಡುತ್ತಾರೆ. ಮಹಿಳಾ ಚಳುವಳಿಯಲ್ಲೂ ಸಾಕ್ಷರತೆಯ ಲಿಂಗ ಸಂಬಂಧಿ ಅಸಮಾನತೆಯ ಬಗ್ಗೆ ಆಕ್ರೋಶ ವನ್ನು ವ್ಯಕ್ತಪಡಿಸಲಾಗುತ್ತದೆ. ಆದರೆ ಅದರ ಎರಡನೆಯ ಮುಖವಾದ ದಲಿತ ಮಹಿಳೆಯರು ಮತ್ತು ದಲಿತೇತರ ಮಹಿಳೆಯರ ನಡುವಿನ ಸಾಕ್ಷರತೆಗೆ ಸಂಬಂಧಿಸಿದ ಅಸಮಾನತೆಯು ಜ್ಞಾನ ಶಿಸ್ತುಗಳಲ್ಲಿ ಚರ್ಚೆಗೆ ಒಳಗಾಗದಿರುವುದು ಆಶ್ಚರ್ಯವುಂಟು ಮಾಡುತ್ತದೆ. ಈ ಬಗೆಯ ಭಿನ್ನತೆ ಕಡೆಗೆ ನೀತಿ–ಕಾರ್ಯಕ್ರಮ ರೂಪಿಸುವವರು ಗಮನ ನೀಡಬೇಕಾಗುತ್ತದೆ.
2. ನಮ್ಮ ಶ್ರೇಣೀಕೃತ ವ್ಯವಸ್ಥೆಯಲ್ಲಿ ಅತ್ಯಂತ ದುಸ್ಥಿತಿಯನ್ನು ಮತ್ತು ಎಲ್ಲ ಬಗೆಯ ಅಸಮಾನತೆಗಳನ್ನು ಅನುಭವಿಸುತ್ತಿರುವ ವರ್ಗವೆಂದರೆ ದಲಿತ ಮಹಿಳೆಯರು. ಅವರು ಲಿಂಗಸಂಬಂಧಿ ಸಾಕ್ಷರತಾ ಅಂತರದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಅವರು ಜಾತಿ ಸಂಬಂಧಿ ಅಸಮಾನತೆಯನ್ನು ಅನುಭವಿಸುತ್ತಿದ್ದಾರೆ. ಅವರು ಮಹಿಳೆಯರೊಳಗೆ ಅನೇಕ ಬಗೆಯ ಅಸಮಾನತೆಗಳನ್ನು ಎದುರಿಸುತ್ತಿದ್ದಾರೆ. ಇದನ್ನು ಸರಿಪಡಿಸುವ ದಿಶೆಯಲ್ಲಿ ಸರ್ಕಾರ ಗಮನ ನೀಡಬೇಕಾಗುತ್ತದೆ.
3. ಅಭಿವೃದ್ಧಿ ಮತ್ತು ಲಿಂಗಸಂಬಂಧಗಳ ನಡುವಿನ ಸಂಬಂಧ ಅತ್ಯಂತ ಸಂಕೀರ್ಣ ವಾದುದು. ಅದಕ್ಕೆ ಅನೇಕ ಮುಖಗಳಿವೆ. ಈ ಸಂಬಂಧವು ಅಭಿವೃದ್ಧಿಯ

ವಿನ್ಯಾಸವನ್ನು ಅವಲಂಬಿಸಿದೆ. ವರಮಾನ ವರ್ಧನೆಯನ್ನು ಕೇಂದ್ರವನ್ನಾಗಿಟ್ಟುಕೊಂಡ ಅಭಿವೃದ್ಧಿ ಪ್ರಣಾಳಿಕೆಯಿಂದ ಲಿಂಗಸಂಬಂಧಿ ಅಸಮಾನತೆಯನ್ನು ಮತ್ತು ಸಾಕ್ಷರತೆಗೆ ಸಂಬಂಧಿಸಿದ ಅಸಮಾನತೆಯನ್ನು ಹೋಗಲಾಡಿಸುವುದು ಸಾಧ್ಯವಿಲ್ಲ. ಅಭಿವೃದ್ಧಿಯು ಎಲ್ಲಿ ಜನರನ್ನು ಒಳಗೊಳ್ಳುವಂತಿರುತ್ತದೋ, ಎಲ್ಲಿ ಅಭಿವೃದ್ಧಿಯು ಜನರ ಧಾರಣಾ ಸಾಮರ್ಥ್ಯವನ್ನು ವಿಸ್ತೃತಗೊಳಿಸುವ ರೀತಿಯಲ್ಲಿರುತ್ತದೋ ಅಲ್ಲಿ ಮಾತ್ರ ಅಭಿವೃದ್ಧಿಯೊಂದಿಗೆ ಲಿಂಗಸಂಬಂಧಿ ಅಸಮಾನತೆಯ ನಿವಾರಣೆಯಾಗ ಬಲ್ಲುದು. ಆದ್ದರಿಂದ ನಾವು ಎರಡನೆಯ ಬಗೆಯ ಅಭಿವೃದ್ಧಿ ಪ್ರಣಾಳಿಕೆಯನ್ನು ಅನುಷ್ಠಾನ ಗೊಳಿಸುವುದರ ಬಗೆ ಒತ್ತಾಯ ಮಾಡಬೇಕಾಗುತ್ತದೆ ಮತ್ತು ಸರ್ಕಾರವು ಅತ್ತ ಕಡೆಗೆ ಗಮನ ನೀಡಬೇಕಾಗುತ್ತದೆ. ಒಟ್ಟಾರೆ ಅಸಮಾನತೆಯನ್ನು ಪ್ರಜ್ಞಾಪೂರ್ವಕ ವಾಗಿ ಎದುರಿಸಬೇಕು. ಅದು ತನ್ನಷ್ಟಕ್ಕೆ ತಾನು ಅಭಿವೃದ್ಧಿ ಯೊಂದಿಗೆ ನಿವಾರಣೆ ಯಾಗುವುದಿಲ್ಲ. ಇದು ಪ್ರಸ್ತುತ ಅಧ್ಯಯನದ ಮೂಲಭೂತ ನೀತಿ-ನಿರ್ದೇಶನ ವಾಗಿದೆ.

## ಗ್ರಂಥಸೂಚಿ


ಜೀನ್ ಡ್ರೀಜ್, ಅಮರ್ತ್ಯಸೇನ್, ೨೦೦೨, ಇಂಡಿಯಾ : ಡೆವಲಪ್‌ಮೆಂಟ್ ಆಂಡ್ ಪಾರ್ಟಿಸಿಪೇಶನ್, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ.

ಅಮರ್ತ್ಯಸೇನ್, ೧೯೯೯, ಡೆವಲಪ್‌ಮೆಂಟ್ ಆಸ್ ಫ್ರೀಡಮ್, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ

ಅಮರ್ತ್ಯಸೇನ್, ೧೯೯೦, ಜೆಂಡರ್ ಅಂಡ್ ಕೊಆಪೋರೇಟಿವ್ ಕಾನ್ಫ್ಲಿಕ್ಟ್ಸ್, ಇಲ್ಲಿ ಟಿ. ಟಿಂಕರ್ (೧೯೯೦) ಪರ್‌ಸಿಸ್ಟಿಂಗ್ ಇನಿಕ್ವಾಲಿಟೀಸ್ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಯಾರ್ಕ್.

ಅಮರ್ತ್ಯಸೇನ್, ೨೦೦೪, 'ಡೆವಲಪ್‌ಮೆಂಟ್ ಆಸ್ ಕೆಪೆಬಲಿಟಿ ಎಕ್ಸ್‌ಪ್ಯಾನ್ಷನ್'. ಇಲ್ಲಿ ರೀಡಿಂಗ್ ಇನ್ ಹ್ಯೂಮನ್ ಡೆವಲಪ್‌ಮೆಂಟ್, ಸಖಿಕೊ ಪುರುಡಫಾರ್ ಮತ್ತು ಎ.ಕೆ. ಶಿವಕುಮಾರ್ (ಸಂ). ಆಕ್ಸ್‌ಫರ್ಡ್. ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಪು. ೩-೧೬

ಮೂರ್ತಿ ಎಮ್ ಮತ್ತು ಇತರರು, ೧೯೯೫, 'ಮಾರ್ಟಾಲಿಟಿ, ಫರ್ಟಿಲಿಟಿ ಆಂಡ್ ಜೆಂಡರ್ ಬಯಾಸ್ ಇನ್ ಇಂಡಿಯಾ' ಇಲ್ಲಿ ಜೀನ್ ಡ್ರೀಜ್, ಅಮರ್ತ್ಯಸೇನ್: ಇಂಡಿಯನ್ ಡೆವಲಪ್‌ಮೆಂಟ್ : ಸೆಲೆಕ್ಟೆಡ್ ರೀಜನಲ್ ಪರ್‌ಸ್ಪೆಕ್ಟೀವ್ಸ್, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ.

ಕರುಣಾ ಚನನಾ, ೨೦೦೧, ಇಂಟರೊಗೇಟಿಂಗ್ ವುಮೆನ್ಸ್ ಎಜುಕೇಶನ್, ರಾವತ್ ಪಬ್ಲಿಕೇಶನ್ಸ್, ಜೈಪುರ್.

ಐರನಿ ವಾನ್ ಸ್ಟೆವರೆನ್, ೨೦೦೪, 'ಕೇರಿಂಗ್ ಫಾರ್ ಎಕನಾಮಿಕ್ಸ್' ಇಲ್ಲಿ ಅನಂತ ಕುಮಾರ್ ಗಿರಿ (ಸಂ) ಕ್ರಿಯೆಟಿವ್ ಸೋಶಿಯಲ್ ರೀಸರ್ಚ್, ವಿಸ್ತಾರ್ ಪಬ್ಲಿಕೇಶನ್ಸ್ ನ್ಯೂಡೆಲ್ಲಿ.

ಗೋಪಾಲ ಗುರು, ೧೯೯೫, 'ದಲಿತ್ ವುಮೆನ್ ಟಾಕ್ ಡಿಫರೆಂಟ್ಲಿ', ಇಲ್ಲಿ ಅನುಪಮಾ ರಾವ್ (೨೦೦೫) ಸಂ. ಜೆಂಡರ್ ಆಂಡ್ ಕಾಸ್ಟ್, ಆಕ್ಸಫರ್ಡ್ ಯೂನಿವರ್ಸಿಟಿ ಪ್ರೆಸ್.

ಮೆಹಬೂಬ್‌ಉಲ್‌ಹಕ್, ೧೯೯೬, ರಿಫ್ಲೆಕ್ಷನ್ಸ್ ಆನ್ ಹ್ಯೂಮನ್ ಡೆವಲಪ್‌ಮೆಂಟ್, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.

ಮಾರ್ತನುಸ್‌ಬೌಮ್, ೨೦೦೦, ವುಮೆನ್ ಆಂಡ್ ಹ್ಯೂಮನ್ ಡೆವಲಪ್‌ಮೆಂಟ್ : ದಿ ಕೆಫಬಲಿಟಿ ಅಪ್ರೋಚ್, ಕೇಂಬ್ರಿಡ್ಜ್ , ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್.

ಚಂದ್ರಶೇಖರ. ಟಿ.ಆರ್. ೨೦೧೦, 'ಕರ್ನಾಟಕದಲ್ಲಿ ವಯಸ್ಕರ ಸಾಕ್ಷರತೆ: ೨೦೦೧', ಯೋಜನಾ. ಸೆಪ್ಟಂಬರ್, ಪುಟ: ೩೭-೪೨.

ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಹತ್ತಾರು ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಕುರಿತು ಸಾಮಾನ್ಯ ಓದುಗರಿಗೆ ಅರಿವನ್ನು ನೀಡಲು ಮಂಟಪ ಮಾಲೆಯಲ್ಲಿ ಕಿರುಪುಸ್ತಕಗಳನ್ನು ಪ್ರಕಟಿಸುತ್ತಿದೆ.

'ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗಸಂಬಂಧಿ ಸ್ವರೂಪ' ಎಂಬ ಕಿರುಹೊತ್ತಿಗೆಯನ್ನು ಈ ಮಾಲೆಗಾಗಿ ಬರೆದುಕೊಟ್ಟಿರುವ ಡಾ. ಟಿ. ಆರ್. ಚಂದ್ರಶೇಖರ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಡಾ. ಎ. ಮುರಿಗೆಪ್ಪ
ಕುಲಪತಿ

ISBN 978-93-80994-10-9

ಬೆಲೆ ರೂ. ೧೦/-

ಮಂಟಪ ಮಾಲೆ - ೧೬೯